

ಅಪರಂಜಿ
ನಗೆಯ ಕಾರಂಜಿ
□ ಆನಂದ್
□ ಭುವನೇಶ್ವರಿ ಹೆಗಡೆ
□ ಅ. ರಾ. ಸೇ.
□ ಕಿಟ್ಟು
□ (ದ
□ ನಾ. ಕಸ್ತೂರಿ
□ ಧನವಂತ
□ ಆರತಿ
ಅಪರಂಜಿ ವಾರ್ಷಿಕ ಸಂಪುಟ 1985-1986
ಸಂಪುಟ–೩
ಸಂಚಿಕೆ–೩
ಡಿಸೆಂಬರ್–85
ದೂವರೆ ರೂಪಾಯಿ

ಅಪರಂಜಿ

ತಿಳಿನಗೆಯ ಕಾರಂಜಿ



- ಆನಂದ್
- ಶಿವಸ್ವಾಮಿ
- ನಳಿನೀಪ್ರಿಯ
- ಕಿಟ್ಟು
- ಜಿ.ಎನ್.ಜಿ.
- ಎಸ್. ಹಾಲಪ್ಪ
- ಭುವನೇಶ್ವರಿ ಹೆಗಡೆ
- ಕಮಲಾ ರಾಮಸ್ವಾಮಿ
- ಲೀಲಾ ಮಿರ್ಲೆ
- ಸೂರಿ

ಬಿಡಿಪ್ರತಿ :

ಕೇವಲ ಒಂದೂವರೆ ರೂಪಾಯಿ

ಸಂಪುಟ-೩
ಸಂಚಿಕೆ-೧೨
ಸೆಪ್ಟಂಬರ್–1986



(ತಿಳಿನಗೆಯ ಕಾರಂಜಿ)

ಸಂಪುಟ ೩ ಸಂಚಿಕೆ ೧೨

ಸೆಪ್ಟೆಂಬರ್ 1986

ಬಿಡಿ ಪ್ರತಿ :—ಕೇವಲ ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : ರೂ. 15/-

ಅಜೀವ ಚಂದಾ : ರೂ. 150/-

ಗೌರವ ಸಲಹೆಗಾರರು :
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು–560 003

ಈ ಸಂಚಿಕೆಯಲ್ಲಿ............

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ ದೂರವಾಣಿ : 362989, 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೩ ಸೆಪ್ಟೆಂಬರ್–೮೬ ಸಂಚಿಕೆ-೧೨

ಯಾವುದನ್ನು ಅರಿತರೆ ಇದೆಲ್ಲವನ್ನೂ ಅರಿತಂತಾಗುತ್ತದೆ ?

—ಮುಂಡಕ

ಬ್ರಹ್ಮವನ್ನರಿತುಕೊಂಡರೆ ಇದೆಲ್ಲವನ್ನೂ ಅರಿತಂತಾಗುತ್ತದೆ ಎನ್ನುವುದು ಜ್ಞಾನಿಗಳ ಮತ. ಆದರೆ ಇದು ಹಿಂದಿನ ಕಾಲದ ಸರಳ ಉತ್ತರ.

ಈ ಸಂಘರ್ಷಯುಗದಲ್ಲಿ ಎಲ್ಲವನ್ನೂ ಅರಿತುಕೊಳ್ಳುವುದು ಅಸಾಧ್ಯ ಎಂದರಿತು ಕೊಳ್ಳುವುದೇ ಒಳ್ಳೆಯದು. The right to know ಎನ್ನುವುದು ತಾತ್ವಿಕವಾದ ಒಂದು ಗ್ರಹಿಕೆ ಅಷ್ಟೇ; the right to doubt ಇಟ್ಟುಕೊಂಡು ತಲೆಕೆಡಿಸಿಕೊಳ್ಳ ಬಹುದು ಅಷ್ಟೇ. ಇದೆಲ್ಲವನ್ನೂ ಅರಿತುಕೊಳ್ಳಲು ನಾವು ಯೋಗ್ಯತೆಯಿಲ್ಲದವರು; ಅವರು ಹೇಳಿದಷ್ಟನ್ನು ಕೇಳಿಕೊಂಡು ಬಿದ್ದಿರಬೇಕಾದ ನರಗುರಿಗಳು ನಾವು. ಅದಕ್ಕೇ ಅಪರಂಜಿ ಕರೆಕೊಡುತ್ತಿದ್ದಾಳೆ ನಿಮ್ಮನ್ನು ಆರಿಸಿದವರಿಗೆ ದ್ರೋಹ ಬಗೆಯ ಬೇಡಿ. ಗೋಸುಂಬೆಗಳ ಮೈತ್ರಿಯನ್ನು ಕೈ ಬಿಡಿ. ನಮ್ಮದೇ ಆದ ಒಂದು ಗುರಿಯನ್ನಿಟ್ಟು ಕೊಳ್ಳೋಣ ನಿಮಗೆ ಬಾರದ ವೋಟಿನ ಆಸೆಗೆ ನಿಮಗೂ ಉಳಿದವರಿಗೂ ಮೋಸ ಮಾಡಬೇಡಬೇಡಿ. ನಿಮ್ಮನ್ನು ಆರಿಸಿದವರಿಗಾದರೂ ನಿಜವನ್ನು ಮರೆಮಾಚ ಬೇಡಿ.

ಅಪರಂಜಿ ಕಿಡಿ

—ಆನಂದ್

ಹಣ ಪ್ರವೃತ್ತಿ ಕೈಬಿಡಲು ಶಿಕ್ಷಣ ಸಂಸ್ಥೆಗಳಿಗೆ ಕರೆ —ಪತ್ರಿಕೆ

ಸುಂಕದವನ ಹತ್ತಿರ ದುಃಖ ಹೇಳಿಕೊಂಡಂತೆ !

* * * *

ಪೋಲಿಸ್ ರೇಡಿಯೋದಲ್ಲಿ ರಾತ್ರಿಯಲ್ಲಿ ಹಾಡುತ್ತಿದ್ದ ಪೇದೆಯನ್ನು ಸಸ್ಪೆಂಡ್ ಮಾಡಲಾಗಿದೆ

—ಸುದ್ದಿ

ಆರಕ್ಷಕ–ವಾಣಿ ಅಧಿಕಾರಿಗಳಿಗೆ ಇಂಪಾಗಿಲ್ಲ ! !

* * * *

ಆಸ್ತಿ ಘೋಷಿಸದ ಸಚಿವ, ಶಾಸಕರು

—ಶೀರ್ಷಿಕೆ

ಪಾಪ, ಅವರ ಆಸ್ತಿ ಹೇಳಿಕೊಳ್ಳಲು ನಾಚಿಕೆಯಾಗುವಷ್ಟು ಮಾತ್ರ ಇರಬಹುದು !

* * * *

ಸಸಿ ನೆಡುವ ಉತ್ಸಾಹದಲ್ಲಿ ನೂರಾರು ಸಸಿಗಳು ಮಕ್ಕಳ ಕಾಲಿಗೆ ಸಿಕ್ಕಿ ನಾಶವಾದುವು

—ಪತ್ರಿಕೆ

ಅರ್ಥವಾಯಿತು ಶಾಂತಿಸ್ಥಾಪನೆಗಾಗಿ ಗೋಲಿಬಾರ್ ಮಾಡಿದರಂತೆ ! !

* * * *

ಹೆಚ್ ಎಂ. ಟಿ. ವಾಚಿನ ಮೇಲೆ ರಾಜೀವ್ ಚಿತ್ರ

—ಸುದ್ದಿ

ಕಾಲ—ಭೈರವ !

* * * *

ಫಲಕದಲ್ಲಿ ಹೆಸರು ಇಲ್ಲದಕ್ಕೆ ಕಾಂಗ್ರೆ ಶಾಸಕರು ಆಕ್ರೋಶದಿಂದ ಶಿಲಾಫಲಕ ಒಡೆದು ಹಾಕಿದರು

—ಸುದ್ದಿ

ಯೋಜನೆಯನ್ನು ಗಂಗಾ ಕಲ್-ಯಾಣ ಎಂದು ಕರೆಯಬಹುದು.

* * * *

ಅಮೆರಿಕನ್ ಮಹಿಳೆಯರು ಬಳಸುವ ವಜ್ರಗಳೆಲ್ಲ ದಕ್ಷಿಣ ಆಫ್ರಿಕಾದಿಂದ ಬರುವುದರಿಂದ ವರ್ಣಬೇಧ ನೀತಿಗೆ ಬೆಂಬಲ

—ಅಮೆರಿಕದ ವಕ್ತಾರರು

ಚಿನ್ನದಂಥ ಮಾತು !

* * * *

ವರ್ಲ್ಡ್ ಕಪ್ ಶ್ಲೋಕ

ಕಪಟಕವಿ

ಮಾರಡೋನಂ ಬುರುಚಾಗಂ
ವಲ್ಡಾನೋ ತಥ ಲೂಯಿ ಬ್ರೌನಂ
ಯಸ್ಮರೇ ಗೋಲ್ಮುಖೇ ನಿತ್ಯಂ
ದುಃಸ್ವಪ್ನಂ ತಸ್ಯ ನಶ್ಯತಿ !

೦

ಶ್ವೇತಕುಮಾರಿ ಮತ್ತು ಕುಬ್ಜ ಸಪ್ತಕ.

—ಎಸ್. ಎನ್ ಶಿವಸ್ವಾಮಿ

[ಇಂಗ್ಲೀಷಿನಲ್ಲಿ ಲೋಕ ವಿಖ್ಯಾತವಾಗಿರುವ "ಸ್ನೊವೈಟ್ ಅಂಡ್‌ದಿಸೆವೆನ್ ಡ್ವಾರ್ಫ್ಸ್" ಅನ್ನುವ ಕಥೆ ಇದು. ನನಗೆ ಇಂಗ್ಲಿಷ್ ಚೆನ್ನಾಗಿ ಬಾರದ್ದರಿಂದ ಮೂಲ ಕೃತಿ ನಾನು ಓದಿಲ್ಲ. ಕಾಮಿಕ್ಸ್ ಚಿತ್ರ ಮಾಲೆ, ಅದು. ಇದು, ನೋಡಿ ನಾನು ಅರ್ಥ ಮಾಡಿ ಕೊಂಡ ಹಾಗೆ ಕನ್ನಡಿಸಿದ್ದೇನೆ.]

ಒಂದಾನೊಂದು ಕಾಲದಲ್ಲಿ ಕಾಡಿನ ನಡುವೆ ಇದ್ದ ಒಂದು ಅರಮನೆಯಲ್ಲಿ ಒಬ್ಬ ರಾಣಿಯಿದ್ದಳು ಅವಳು ರಾಜನ ಎರಡನೇ ಹೆಂಡತಿ. ಮೊದಲನೇ ಹೆಂಡತಿಯಿಂದ ರಾಜನಿಗೆ ಒಬ್ಬ ಮಗಳಿದ್ದಳು. ಬಿಳಿಚಿಕೊಂಡ ಹಲ್ಲಿಯಂತೆ ಅವರು ತೆಳ್ಳಗೆ ಬೆಳ್ಳಗಿದ್ದದ್ದರಿಂದ ಅವಳಿಗೆ ಶ್ವೇತಕುಮಾರಿ ಅಂತ ಹೆಸರಿಟ್ಟಿದ್ದರು. ರಾಜಕುಮಾರಿಗೆ ಸ್ಕೂಲು ಅಂದರೆ ಆಗದು, ಮನೆಪಾಠ ಬೇಡವಾಗಿತ್ತು, ಎಂದೂ ಪುಸ್ತಕ ಮುಟ್ಟಿದವಳಲ್ಲ: ಸ್ಲೇಟು ಬಳಪ ಕಂಡವಳಲ್ಲ. ಸದಾ ಆಟವಾಡಿಕೊಂಡು ಆಳು ಕಾಳುಗಳನ್ನು ಗೋಳುಹುಯ್ದು ಕೊಂಡೇ ಕಾಲ ಕಳೆಯುತ್ತಿದ್ದಳು.

ರಾಣಿ ತ್ರಿಪುರ ಸುಂದರಿ. ಮಿಸ್ ಇಂಡಿಯಾ ಪ್ರಶಸ್ತಿ ವಿಜೇತೆ, ಗುಣವತಿ, ಶ್ವೇತಕುಮಾರಿ ಮೂರು ಹೊತ್ತು ತನ್ನನ್ನು "ಚಿಕ್ಕಮ್ಮ, ಅದುಕೊಡು, ಇದುಕೊಡು ಸಿನಿಮಾಗೆ ಕರಕೊಂಡು ಹೋಗು ಅಂತೆಲ್ಲ ಪೀಡಿಸುತ್ತಿದ್ದರೂ ಹುಬ್ಬು ಗಂಟಿಕ್ಕದೆ ಅವಳನ್ನು ಸಕಲ ವಿಧದಲ್ಲೂ ಆದರಿಸುತ್ತಿದ್ದಳು. ರಾಣಿ ಹೊಸದಾಗಿ ಮದುವೆ ಯಾಗಿ ಅರಮನೆಗೆ ಬಂದರೆ ಷೋ ಅಷ್ಟೆ ಅವಳಿಗೆ ಸುಖ ಅನ್ನುವುದೇ ಇಲ್ಲ. ಹನಿ ಮೂನಿಗೆ ಕೂಡ ಹೋಗಲವಕಾಶವಿಲ್ಲ. ಜೊತೆಗೆ ತಂದ ಕಾದಂಬರಿಗಳನ್ನು ಓದು ವಷ್ಟು ಪುರಸೊತ್ತಿಲ್ಲ. ಸಾಲದ್ದಕ್ಕೆ ಶ್ವೇತಕುಮಾರಿ "ನೀನೆಂಥ ಮಿಸ್ ಇಂಡಿಯಾ ! ನಿನಗಿಂತ ನಾನೇ ಸುಂದರಿ, ಬೇಕಾದರೆ ಈ ಮಾಯಾದರ್ಪಣವನ್ನ ಕೇಳು" ಅಂತ ಪದೇ ಪದೇ ಅವಳನ್ನು ಹೀಗಳೆಯುತ್ತಿದ್ದಳು. ಆ ಮಾಯಾದರ್ಪಣವೋ, ಶ್ವೇತ ಕುಮಾರಿ ಹೇಳಿದ ಹಾಗೆ ಕುಣಿಯಲು ತಯಾರಾಗಿತ್ತು, ರಾಣಿ ಪ್ರಶ್ನೆ ಕೇಳಿದಾಗಲೆಲ್ಲ ಅದು "ನಿನಗಿಂತ ಶ್ವೇತಕುಮಾರಿಯೇ ಸುಂದರಿ" ಅಂತ ಸುಳ್ಳು ಹೇಳುತ್ತಿತ್ತು, ರಾಣಿ ಇನ್ನಷ್ಟು ಸ್ನೋ, ಪೌಡರ್. ರಂಗುಗಳನ್ನು ತರಿಸಿ ಬಳಿದುಕೊಂಡು ಫಜೀತಿ ಮಾಡುತ್ತಿದ್ದಳು.

ಒಂದು ದಿನ ರಾಣಿ, "ಈ ಹುಡುಗಿ ಸ್ಕೂಲಿಗಂತೂ ಹೋಗಲಿಲ್ಲ, ಕಾಡಿಗಾದರೂ ಹೋಗಿ ಪಶು ಪಕ್ಷಿ ಜೀವನವನ್ನು ಒಂದಿಷ್ಟು ಅಧ್ಯಯನ ಮಾಡಲಿ" ಅಂತ ನಿಶ್ಚಯಿಸಿದಳು. ಕಾಡಿನಲ್ಲಿದ್ದ ತನ್ನ ನೆಂಟರಿಗೆ ಫೋನುಮಾಡಿ ಅವರ ಗೆಸ್ಟ್ ಹೌಸನ್ನು ಸಜ್ಜು ಗೊಳಿಸುವಂತೆ ಹೇಳಿದಳು. ಒಂದು ಒಳ್ಳೆ ದಿನ ನೋಡಿ ಆಳಿನ ಜತೆಗೆ ಶ್ವೇತಕುಮಾರಿಯನ್ನು ಅಲ್ಲಿಗೆ ಕಳಿಸಿ ಕೊಟ್ಟಳು. ಆಳಿನ ಕೈಯಲಿ ಶ್ವೇತಕುಮಾರಿಯ ರಕ್ಷಣೆಗಾಗಿ ಒಂದು ಚೂರಿಯಿತ್ತು. ಅದನ್ನು ನೋಡಿ ಗಾಬರಿಯಾಗಿ ಶ್ವೇತ ಕುಮಾರಿ ಅವನ ಕೈಬಿಡಿಸಿ ಕೊಂಡು ತನಗೆ ಪರಿಚಿತವಾಗಿದ್ದ ಕಾಡಿನೊಳಗೆ ಓಡಿ ಮಂಗಮಾಯವಾದಳು. ಓಡಿ ಓಡಿ ಸುಸ್ತಾಗಿ ಎದುರಿಗೆ ಕಂಡ ಅದೇ ನೆಂಟರ ಮನೆಯೊಳಕ್ಕೆ ನುಗ್ಗಿದಳು. ನೆಂಟರು ಏಳು ಜನ ಕುಬ್ಜರು, ವಜ್ರದ ಗಣಿ ಕಂಟ್ರಾಕ್ಟರುಗಳು. ಅವರು ಶ್ವೇತ ಕುಮಾರಿ ಬರುತ್ತಾಳೆಂದು ರಾಣಿಯ ಫೋನು ಕರೆ ಬಂದ ಕೂಡಲೇ ತಮ್ಮಲ್ಲಿದ್ದ ವಜ್ರಗಳು, ಹಣಕಾಸುಗಳನ್ನೆಲ್ಲ ಬ್ಯಾಂಕಿನ ಲಾಕರುಗಳಲ್ಲಿ ಭದ್ರ ಮಾಡಿಟ್ಟು ಬಿಟ್ಟಿದ್ದರು. ಈಗ ಮನೆಯಲ್ಲಿ ಶ್ವೇತ ಕುಮಾರಿ ಉಳಿದುಕೊಳ್ಳಲು ಅವರಿಗೇನೂ ಅಭ್ಯಂತರವಿರಲಿಲ್ಲ, ಬೀಗದ ಕೈಯನ್ನು ವರಾಂಡಾದಲ್ಲೇ ಕಾರ್ಪೆಟ್ಟಿನ ಕೆಳಗಿಟ್ಟಿದ್ದರು. ಅಡಿಗೆ ಮಾಡಿಟ್ಟಿದ್ದರು, ಶ್ವೇತಕುಮಾರಿ ಹಾಯಾಗಿ ಒಳಗೆ ಹೋಗಿ ಹೊಟ್ಟೆ ತುಂಬ ಊಟಮಾಡಿ ಮಲಗಿ ಗೊರಕೆ ಹೊಡೆಯಲಾರಂಭಿಸಿದಳು. ಬಿರುಗಾಳಿಯಂತೆ ಆ ಮನೆ ಹೊಕ್ಕ ಶ್ವೇತ ಕುಮಾರಿ ಮನೆಯಲ್ಲಿದ್ದ ಸಾಮಾನುಗಳನ್ನೆಲ್ಲ ತಸಗಿಷ್ಟಬಂದ ಹಾಗೆ ಕದಲಿಸಿ ಅಲ್ಲೋಲ ಕಲ್ಲೋಲ ಮಾಡಿದ್ದಳು. ಹೀಗಾಗಿಯೇ ಆಗುತ್ತೆಂದು ಮುನ್ಸೂಚನೆಯಿದ್ದುದ್ದರಿಂದ ಕುಬ್ಜರು ಇದಕ್ಕೆಲ್ಲ ಬೇಜಾರು ಮಾಡಿಕೊಳ್ಳಲಿಲ್ಲ. ಏನಷ್ಟಾದರೂ ರಾಜಕುಮಾರಿ, ಸಂತೋಷವಾಗಿದ್ದರೆ ಸಾಕು, ಅಂದುಕೊಂಡು ಅವರು ಅವಳು ಮಾಡಿದ್ದ ಅವಾಂತರವನ್ನೆಲ್ಲ ಸರಿಪಡಿಸಿದರು.

ಒಂದು ದಿನ ರಾಣಿ, ತನ್ನ ದಾಯಾದಿಗಳು ಶ್ವೇತ ಕುಮಾರಿಯನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆ, ನೋಡಿಕೊಂಡು ಬರೋಣವೆಂದು ಕಾಡಿಗೆ ಬಂದಳು. ಆ ವೇಳೆಗೆ ಸ್ನೋ, ಪೌಡರು, ಬಣ್ಣಗಳು ತಿಕ್ಕಿದ್ದು ವಿಪರೀತಕ್ಕಿಟ್ಟುಕೊಂಡು ಅವಳ ಮುಖವೇ ಸುಟ್ಟು ಹೋದಂತಾಗಿತ್ತು, ಅವಳ ಮುಖನೋಡಿ ಶ್ವೇತಕುಮಾರಿಗೆ ಭಯವೇ ಆಯಿತಾದರೂ ಅವಳು ಪ್ರೀತಿಯಿಂದ ಕೊಟ್ಟ ಕಾಶ್ಮೀರಿ ಸೇಬನ್ನು ಆಸೆಯಿಂದ ಇಸುಕೊಂಡಳು. ಈ ನಡುವೆ ಅವಳು ಕುಬ್ಜರು ಅವಿತಿಟ್ಟಿದ್ದ ಅಫೀಮು ಡಬ್ಬಿಯನ್ನು ಪತ್ತೆ ಹಚ್ಚಿದ್ದು, ಅಫೀಮು ಸೇವಿಸುವುದನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಳು. ಸೇಬಿನ ಜತೆಗೆ ಒಂದೆರಡು ಗುಳಿಗೆ ಅಫೀಮನ್ನೂ ಅಗಿದು ನುಂಗಿದಳು ಆ ಮಂಪರಿನಲ್ಲಿ, ಮನೆಗೆ ಬಂದ ಚಿಕ್ಕಮ್ಮನಿಗೆ ಕಾಫಿ ಮಾಡಿ ಕೊಡುವುದನ್ನೂ ಮರೆತಳು. ಮಾತನಾಡಿಸುವುದನ್ನೂ ಮರೆತಳು. ಇದರಿಂದ ದು:ಖತಪ್ತಳಾದ ರಾಣಿ

ಕತ್ತಲೆಯಲ್ಲೇ ಓಡೋಡುತ್ತ ಹೋಗಿ ಬಂದು ಕಮರಿಯಲ್ಲಿ ಬಿದ್ದು ಆತ್ಮ ಹತ್ಯೆ ಮಾಡಿಕೊಂಡಳು.

ಗಣಿಕೆಲಸದಿಂದ ಮನೆಗೆ ಹಿಂದಿರುಗಿದ ಕುಬ್ಜರು ಮೈ ಮರೆತು ಬಿದ್ದಿದ್ದ ಶ್ವೇತ ಕುಮಾರಿಯನ್ನು ನೊಡಿ ಅವರು ಸತ್ತೇ ಹೋದಳೆಂದು ಭಾವಿಸಿದರು, ಬೇಗ ಬೇಗ ರಾತ್ರಿ ಶವಪೆಟ್ಟಿಗೆಯೊಂದನ್ನು ತಯಾರಿಸಿ ಅದರೊಳಗೆ ಅವಳನ್ನು ಮಲಗಿಸಿ ಹೊರಗೆ ತಂದರು. ಹೂಳಲು ತಕ್ಕ ಮುಹೂರ್ತಕ್ಕಾಗಿ ಅವರು ಕಾಯುತ್ತಿದ್ದಾಗ ಅಲ್ಲಿಗೊಬ್ಬ ರಾಜಕುಮಾರ ಬಂದ. ಅವನು ಈ ಶ್ವೇತಕುಮಾರಿಯೇ ಜಗತ್ತಿನಲ್ಲೆಲ್ಲ ಅತ್ಯಂತ ಸುಂದರಿಯೆಂದು ನಂಬಿದ. ಪ್ರೇಮ ಪರವಶನಾದ ರಾಜಕುಮಾರನು ಶವಪೆಟ್ಟಿಗೆಯ ಮುಚ್ಚಳವನ್ನು ತೆಗೆದು ಶ್ವೇತಕುಮಾರಿಯ ಹಣೆಗೆ ಮುತ್ತಿಟ್ಟನು. ಆಗ ಕುಬ್ಜರ ಎದೆ ಗಳು ಧಸಕ್ಕೆನ್ನುವಂತೆ ಒಂದು ಪವಾಡ ನಡೆಯಿತು. ಶ್ವೇತಕುಮಾರಿ ಪಿಳಪಿಳನೆ ಕಣ್ಣು ಬಿಡುತ್ತ ಎದ್ದು ಕೂತಳು. ಇದೇನಪ್ಪ, ಈ ಪ್ರಾರಬ್ಧ ತಿರುಗಿಬಂತಲ್ಲ, ಅಂತ ಕುಬ್ಜರು ಪೇಚಾಡುತ್ತಿದ್ದಾಗ ರಾಜಕುಮಾರನು ಶ್ವೇತಕುಮಾರಿಯನ್ನು ಕುದುರೆಯ ಮೇಲೆ ಕೂರಿಸಿಕೊಂಡು ದೂರ ಹೊರಟು ಹೋದನು. ಕುಬ್ಜರು ತಮ್ಮ ಜವಾಬ್ದಾರಿ ತಪ್ಪಿದ ಆನಂದದಲ್ಲಿ ಕುಣಿದು ಕುಪ್ಪಳಿಸಿದರು. ತಮಗೆ ತಿಳಿದ ಪೋಲಿ ಹಾಡುಗಳನ್ನೆಲ್ಲ ಹಾಡಿ ದರು. ಜೇಬುಗಳಲ್ಲಿದ್ದ ವಜ್ರಗಳನ್ನೆಲ್ಲ ಸಿಕ್ಕಿದಂತೆ ಎರಚಾಡಿದರು. ಸಾಕಾಗುವಷ್ಟು ಅಫೀಮು ತಿಂದು ಸ್ವರ್ಗಸುಖ ಅನುಭವಿಸಿದರು.

ಬೆಂಗಳೂರು ಇಂದು-೬

ನಳಿನೀ ಪ್ರಿಯ

ಫಾಸ್ಟ್ ಫುಡ್

ಬೆಂಗಳೂರಿನಲ್ಲಿ ಈಚೆಗೆ ಹೊಸ ತರಹದ ಹೋಟೆಲುಗಳು ಅಣಬೆಗಳಂತೆ ತಲೆ ಎತ್ತುತ್ತಿವೆ. ಯಾವ ಬಡಾವಣೆಯಲ್ಲಿ ನೋಡಿದರೂ, ತರುಣ ತರುಣಿಯರ ಬಾಯಲ್ಲಿ ಈ ಫಾಸ್ಟ್ ಫುಡ್ ಜಾಯಿಂಟ್‌ಗಳ ಬಗ್ಗೆ ಮಾತು. ಒಂದು ಸಂಜೆ, ತಮ್ಮ ಟೀನ್ ಏಜ್ ಕುವರಿಯ ಬಲವಂತಕ್ಕೆ ಶಾಂತಿನಗರದ ಚಿನ್ನಸ್ವಾಮಿ ಗುಪ್ತ ರವರು ತಮ್ಮ ಧಡೂತಿ ಅರ್ಧಾಂಗಿ (ಅರ್ಧಾಂಗಿ ಏನು, ಮುಕ್ಕಾಲಂಗಿ ಎನ್ನಬಹುದು) ಸುನಂದಮ್ಮನವರೊಡನೆ ಕಂಟೋನ್‌ಮೆಂಟಿನ ಫಾಸ್ಟ್ ಫುಡ್ ಜಾಯಿಂಟ್ ಒಂದಕ್ಕೆ ಹೋದರಂತೆ. ಸುನಂದಮ್ಮನವರಿಗೋ ಎಂಟೀಯಾರ್ ತಿಂಡಿಗಳನ್ನು ಬಿಟ್ಟರೆ ಬೇರೇನೂ ಅಭ್ಯಾಸವಿಲ್ಲ. ಆದರೆ ಇಲ್ಲಿ? ಅದೇನೋ ಹ್ಯಾಂಬರ್ಗರ್ ಅಂತೆ, ಪಿಜಾ ಅಂತೆ. ಹಾಟ್‌ಡಾಗ್ ಅಂತೆ ಏನೇನೋ ವಿಚಿತ್ರ ತಿಂಡಿಗಳು. ಮಗಳೇನೋ ಹ್ಯಾಂ ಬರ್ಗರ್ ಕೇಳಿದಳು. ಗುಪ್ತರು, ತಮಗೆ ಸಹಜವಾದ ಹುಷಾರಿನಿಂದ ಸ್ಯಾಂಡ್ ವಿಚಸ್ ಆರ್ಡರ್ ಮಾಡಿದರು. ಮಗಳ ಬಲವಂತಕ್ಕೆ ಸುನಂದಮ್ಮನವರಿಗೆ ಇಟಾ ಲಿಯನ್ ಪಿಜ್ಜಾ. ತಟ್ಟೆಯಲ್ಲಿ ಪಿಜ್ಜಾ ಬಂದಾಗ, ನೋಡಲು ಉತ್ತಪ್ಪ ಮತ್ತು ಹೋಳಿಗೆಗಳ ಶುಭವಿವಾಹದಿಂದ ಜನಿಸಿದ ಶಿಶುವಿನಂತಿತ್ತು. ಒಂದು ತುಣುಕು ಮುರಿಯಲು ಹೋದರೆ ಕೈ ಎಲ್ಲಾ ಅಂಟಂಟು. ಬಾಯಲ್ಲಿಟ್ಟರೆ ದರಿದ್ರವಾಸನೆ. ತಟ್ಟೆಯನ್ನು ದೂರಸರಿಸಿ ಕುಳಿತರು ಸುನಂದಮ್ಮ. ತಂದೆ, ಮಗಳು ಚಪ್ಪರಿಸಿ ತಿಂದ ನಂತರ ಗುಪ್ತತ್ರಯ (ಶ್ರೀಯುತ, ಶ್ರೀಮತಿ ಹಾಗೂ ಕುಮಾರಿ) ಹೊರ ಬರುತ್ತಿ ದ್ದಾಗ, ಸುನಂದಮ್ಮ ಹೇಳಿದ್ದು "ಈಗ ಗೊತ್ತಾಯ್ತುರೀ, ಇದನ್ನು ಯಾಕೆ FAST ಫುಡ್ ಅಂತ ಕರೀತಾರೆ ಅಂತ !"

ತಮಸೋ ಮಾಂ ಜ್ಯೋತಿರ್ಗಮಯ

ಸುನಂದಮ್ಮನವರೇನೋ FAST ಮಾಡಿದರೂ ಪರವಾಗಿಲ್ಲ, ಅವರ ತೂಕಕ್ಕೆ ಡಯಟ್ ಮಾಡುವುದೇ ವಾಸಿ ಎನ್ನ ಬಹುದಾದರೂ, ರಾಜಾಜೀನಗರದ ರೇವಣ ಸಿದ್ದಪ್ಪನವರ ಸಮಸ್ಯೆ ಇನ್ನೂ ತೀವ್ರತರವಾದದ್ದು, ತಿಂಗಳ ಕೊನೆ ಸಮೀಪಿಸುತ್ತಿದ್ದಂತೆ, ಕೃಷ್ಣ ಪಕ್ಷದ ಚಂದ್ರಮನಂತೆ, ಅವರ ಮನೆಯಲ್ಲಿನ ದೀಪಗಳು

ಉರಿಯುವ ಕಾಲ ಕ್ಷೀಣಿಸುತ್ತಾ ಹೋಗುತ್ತದೆ. ಕೆಲವು ತಿಂಗಳುಗಳ ಕೆಳಗೆ, ಅವರ ಮನೆಯ ಎಲೆಕ್ಟ್ರಿಸಿಟಿ ಮೀಟರ್ ಬಲು ನಿಧಾನವಾಗಿ ಓಡಿ, ಕಡಿಮೆ ಯೂನಿಟ್‌ಗಳನ್ನು ತೋರಿಸುತ್ತಿತ್ತಂತೆ. ಅವರೂ ಸಹ ಕಡಿಮೆ ಬಿಲ್ಲುಗಳನ್ನು ನೋಡುತ್ತಾ ಖುಷಿಯಾಗಿ ಇದ್ದರಂತೆ. ವಿದ್ಯುತ್ ಕಡಿತ ಬಂದು, ಬಳಕೆ ಯೂನಿಟ್‌ಗಳಿಗೆ ಮಿತಿ ವಿಧಿಸಲ್ಪಟ್ಟಾಗಿನಿಂದ, ತೀರ ಕಡಿಮೆ ಯೂನಿಟ್‌ಗಳನ್ನು ಬಳಸಬೇಕಾಗಿ ಬಂದದ್ದು ಈ ಸಮಸ್ಯೆಯ ಉಗಮ. ಹೆಚ್ಚು ಯೂನಿಟ್ ಬಳಸಲು, ವಿದ್ಯುತ್ ಪೂರೈಕೆ ನಿಂತುಬಿಡುವ ಭಯ. ಮಿತ್ರ ಕಂಟ್ರಾಕ್ಟರ್ ಕರಿಬಸಪ್ಪನವರನ್ನು ಕೇಳಿದಾಗ, ಆತ "ಯಾಕೆ ಯೋಚ್ನೆ ಸಿದ್ದಪ್ನೋರೆ, ಕೆ.ಇ.ಬಿ.ಗೆ ಓಗಿ, ಕೈ ಬೆಚ್ಚಗ್ಮಾಡಿದ್ರಾಯ್ತು. ನಾಳೇನೇ ಮಾಡ್ಕೊಂಬನ್ನಿ" ಅಂತ ಸಲಹೆ ನೀಡಿದನಂತೆ. ರೇವಣಸಿದ್ದಪ್ಪನೋರು ಸಾಧು ಪ್ರಾಣಿ. ಲಂಚ, ರುಷುವತ್ತು ಏನೂ ತಿಳೀದು. ತಾವಾಯ್ತು ತಮ್ಮ ಕೆಲಸವಾಯ್ತು. ಆದರೂ ಏನಾದ್ರೂ ಮಾಡಲೇ ಬೇಕಲ್ಲ. ಕೆ.ಇ.ಬಿ.ಗೆ ಹೋಗಿ ಸಂಬಂಧಿಸಿದ ಆಸಾಮಿನ ಪತ್ತೆ ಹಚ್ಚಿದ್ದಾಯಿತು. "ಸ್ವಾಮಿ, ನಮ್ಮ ವಿದ್ಯುತ್ ಮಿತಿ ಹೆಚ್ಚಿಸ್ಬೇಕು. ಸಹಾಯ ಮಾಡ್ತೀರ?" ನಮ್ರತೆಯಿಂದಲೇ ಕೇಳಿದರು. ರೇ.ಸಿ.

ಆಸಾಮಿ "ಅದೆಂಗಾಗ್ತದೆ? ಪವರ್‌ಕಟ್ ಇಲ್ವಾ? ನಿಮ್ಮೊಬ್ಬರ್ಗೇ ಮಾಡಕ್ಕಾಗ್ತದಾ?" ಅಂದು ತಿರುಗಿ ಫೈಲ್‌ಗಳಲ್ಲಿ ಮಗ್ನನಾದ. ರೇವಣಸಿದ್ದಪ್ಪನವರಿಗೆ, ಏನೂ ತೋಚಲಿಲ್ಲ. ಇಷ್ಟು ರೂಪಾಯಿ ಕೊಡಿ, ಮಾಡಿಸ್ಕೊಡ್ತೀನಿ, ಅಂದಿದ್ರೆ, ಕೊಡಕ್ಕೆ ತಯಾರಾಗಿ ಬಂದಿದ್ರು. ಆದ್ರೆ ಅದರ ಸುದ್ದೀನೇ ಇಲ್ಲ. ಸುಮ್ಮನೆ ಕುಳಿತು ಬಿಟ್ಟರು.

ಸ್ವಲ್ಪ ಹೊತ್ತಿನ ನಂತರ ಆಸಾಮೀನೇ ಶುರು ಮಾಡಿದ

"ಅಡ್ಜಸ್ಟ್‌ಮೆಂಟ್ ಏನಾರಾ ಮಾಡ್ತೀರ?"

"ಅಡ್ಜಸ್ಟ್‌ಮೆಂಟ್ ಅಂದ್ರೇನಪ್ಪಾ?" ಸಿದ್ಧಪ್ಪನವರ ಮುಗ್ಧ ಪ್ರಶ್ನೆ.

"ನೋಡ್ರೀ ಇಲ್ಲೀ, ನೀವೂ ಬದುಕ್ಬೇಕು, ನಾವೂ ಬದುಕ್ಬೇಕು ಅಲ್ವಾ!"

"ಖಂಡಿತಾ ನಿಜಾಸಪ್ಪಾ. ಇಬ್ರೂ ಬದುಕ್ಬೇಕು. ಆದ್ರೆ ಯೂನಿಟ್ ಮಿತಿ ಹೆಚ್ಚಿಸೋಕ್ಕು ಬದುಕೋದಕ್ಕೂ ಏನು ಸಂಬಂಧ?" ನಿಜವಾದ ಕುತೂಹಲದಿಂದ ಕೇಳಿದರು ಸಿದ್ದಪ್ಪ. ಅವರಿಗೆ ಸಂಭಾಷಣೆಯ ತಲೆ ಬುಡ ಅರ್ಥವಾಗಿರಲಿಲ್ಲ.

ಕೊನೆಗೆ ಆಸಾಮಿ ರೇಗಿ "ಏನೂ ಮಾಡುಕ್ಕಾಗುಲ್ಲ ಹೋಗ್ರಿ, ನಿಮ್ಮ ಕರ್ಮ! ಅಂತ ಗದರಿಸಿ ಕಳಿಸಿದ.

ಈಗ ಸಿದ್ದಪ್ಪನವರು ತಮಸೋಮಾಂ ಜ್ಯೋತಿರ್ಗಮಯ ಅಂತ ಪ್ರಾರ್ಥಿಸುತ್ತಿದ್ದಾರೆ.

ಕೈ ಕೆಸರಾದರೆ ಬಾಯ್ ಮೊಸರು

ಸಿದ್ದಪ್ಪನವರ ಮನೆ ಕತ್ತಲಲ್ಲಿ ಮುಳುಗಿದ್ದರೂ, ಅವರ ಪಕ್ಕದ ಮನೆಯಲ್ಲಿ ಆ ಸಂಜೆ ದೀಪೋತ್ಸವ. ಕಾರಣ? ಹೊಸಮನೆ–ಗೃಹಪ್ರವೇಶ. ಮನೆಯ ಯಜಮಾನ, ಆರ್ ವಿ. ರಾಮಚಂದ್ರು, ಸಫಾರಿ ಧರಿಸಿ ಸಂಭ್ರಮದಿಂದ ಓಡಾಡುತ್ತಿದ್ದಾರೆ. ಅವರ ಅಣ್ಣ, ಆರ್. ವಿ. ಸುಬ್ಬಣ್ಣ, ಜರಿಪಂಚೆ, ಸಿಲ್ಕ್ ಜುಬ್ಬಾನ್ವಿತರಾಗಿ, ಸೋಫದ ಮೇಲೆ, ಸುಖಾಸೀನರಾಗಿದ್ದಾರೆ. ತಮ್ಮನ ಮುಖದಲ್ಲಿ ಸಹಜವಾಗಿ ಮಂದಹಾಸ, ಅಣ್ಣನ ಮುಖದಲ್ಲಿ ಇಂಗು ತಿಂದ ಮಂಗನ ಕಳೆ. ಏಕೆ? ಹೈಪರ್ ಅಸಿಡಿಟಿಯೇ? ಅಲ್ಸರ್ ಏನಾದರೂ ಇದೆಯೇ ಅಂತ ಊಹಿಸಬೇಡಿ. ಗುಟ್ಟಾಗಿ ಹೋಗಿ ಅವರನ್ನೇ ಕೇಳೋಣ.

"ಯಾಕೆ ಈ ಗೋಳು ಮೋರೆ, ಈ ಸಂತೋಷ ಸಮಾರಂಭದಲ್ಲಿ ಅಂತ ಕೇಳ್ತೀರ? ಬನ್ನಿ ಹೇಳ್ತೀನಿ. ಇಲ್ಲಾರೀ, ಹೊಟ್ಟೆಕಿಚ್ಚೇನೂ ಇಲ್ಲ, ಹಾಗಿದ್ರೆ ಬರ್‍ತಾನೇ ಇರ್‍ತಿಲ್ಲ. ನಮ್ಮಪ್ಪ ಸತ್ತಾಗ ರಾಮುಗೆ ಏಳು ವರ್ಷ. ಆಗಿನಿಂದ ನಾನೇ ಅವನ್ನ ಬೆಳೆಸಿದ್ದು. ನಾನು ಬಿ. ಎ. ಪ್ಯಾಸ್ ಮಾಡಿ ಸರ್ಕಾರೀ ನೌಕರಿ ಗಿಟ್ಟಿಸ್ದಾಗ ರಾಮು ಎಸ್ಸೆಸ್ಸೆಲ್ಸಿಲಿ ಏಳನೇ ಸಲ ಢುಮ್ಕಿ ಹೊಡೆದಿದ್ದ. ವಿದ್ಯೆ ಹತ್ಲಿಲ್ಲ ಕೆಲ್ಸ ನಾದ್ರೂ ಶ್ರದ್ಧೆಯಿಂದ ಮಾಡು ಅಂದ್ರೆ ಉಹುಂ. ಶುದ್ಧ ಸೋಮಾರಿ, ನಾನು ಹೇಳ್ತಾನೇ ಬಂದೆ "ಕೈ ಕೆಸರಾದರೆ ಬಾಯ್ ಮೊಸರು, ಕೆಲ್ಸಕ್ಕೆ ಸೇರ್ಕೊ, ಹೀಗಿದ್ರೆ ಕೊನೆಗಾಲ್ದಲ್ಲಿ ಯಾರ್ ನೊಡ್ಕೋತಾರೆ.? ನಾನ್ನೋಡು, ವಿಮೆ ಮಾಡ್ಸಿದೀನಿ, ಪಿಗ್ಮಿ ಇದೆ. ಏನಿಲ್ಲಾ ಅಂದ್ರೂ ರಿಟೈರಾಗೊ ಹೊತ್ಗೆ ಒಂದು ಲಕ್ಷ ಜಮಾಯಿಸಿರುತ್ತೆ. ಅಂತ ಗಿಣೀಗೆ ಹೇಳೋ ಹಾಗೆ ಹೇಳ್ದೆ. ಶುದ್ಧ ಲಫಂಗನ ತರಹಾ ಕಾಲಕಳ್ದು ಬಿಟ್ಟ. ಇಸ್ಪೀಟು, ರೇಸು, ಎಲ್ಲಾ ಇತ್ತು. ಮುಂದಿನ್ವರ್ಷ ನನಗೆ ರಿಟೈರಾಗುತ್ತೆ, ಆಗ ತೋರಿಸ್ತೀನಿ ಈ ಕಳೆದ ಮೂವತ್ತು ವರ್ಷ ದುಡಿದಿದ್ದರ ಫಲಾನಾ ಅಂದ್ಕೊಳ್ತಾನೇ ಇದ್ದೆ. ಆದ್ರೆ, ನೋಡಿ ಆರು ತಿಂಗಳ ಕೆಳಗೆ ರಾಮುಗೆ ಕರ್ನಾಟಕ ಲಾಟ್ರಿಲಿ ಎರಡು ಲಕ್ಷ, ಆಂಧ್ರ ಲಾಟ್ರಿಲಿ ಒಂದೂವರೆ ಲಕ್ಷ ಬಂದ್ಬಿಡ್ತು, ಮನೆ ಕಟ್ಸಿ, ಮಿಕ್ಕ ದುಡ್ನ ಬ್ಯಾಂಕ್‌ಗೆ ಹಾಕಿ, ಇವತ್ತು ಗೃಹ ಪ್ರವೇಶ ಮಾಡ್ತಿ

ದ್ದಾನೆ. ನನ್ನೂ ಇಲ್ಲೆ ಬಾ, ಬಾಡ್ಗೆ ಯಾಕ್ಕೊಡ್ತೀಯ ಅಂತ ಬೇರೇ ಹೇಳ್ದ. ಕೈಕೆಸರಾದರೆ ಬಾಯ್ ಮೊಸರಂತೆ, ಈ ಗಾದೆ ಮನೆ ಹಾಳಾಯ್ತು

ಇಷ್ಟಾರ್ಥ ಸಿದ್ಧಿ

ಮೊನ್ನೆ ಮಲ್ಲೇಶ್ವರದಲ್ಲಿ ನಮ್ಮ ಪರಿಚಿತ ವಯೋವೃದ್ಧರೊಬ್ಬರ ಮನೆಗೆ ಹೋಗಿದ್ದೆ. ಆತ ಬಹಳ ದೊಡ್ಡಸ್ತಿಕೆ ಮನುಷ್ಯ. ಸಮಾಜದ ಸ್ಥಾನಮಾನದ ಬಗ್ಗೆ ಬಹಳ ಭಕ್ತಿ. ಸಮಾಜದ ಎಲ್ಲ ಪ್ರತಿಷ್ಠಿತ ಕ್ಲಬ್‌ಗಳಲ್ಲಿಯೂ ಸದಸ್ಯತ್ವ ದೊರಕಿಸಿ ಕೊಳ್ಳುವ ಹಂಬಲ. ಅನೇಕ ವರ್ಷಗಳ ಪ್ರಯತ್ನದಿಂದಲೂ ಯಾವ ಫಲ ದೊರೆತಿರಲಿಲ್ಲ. ಅವರಿಗೆ ಹಠಾತ್ ಹೃದಯಾಘಾತವಾದ ಸುದ್ದಿ ಕೇಳಿ, ಅವರನ್ನು ನೋಡಲು ಹೋಗಿದ್ದೆ. ಮನೆಗೆ ಹೋದಾಗ, ಆತ ನಿದ್ರಿಸುತ್ತಿದ್ದುದರಿಂದ ಮಗನನ್ನು ಭೇಟಿ ಮಾಡಿ ವಿಷಯ ಕೇಳಿದೆ.

"ಬೆಳಿಗ್ಗೆ ಟಪಾಲಿನಲ್ಲಿ ಬಂದ ಪತ್ರ ಓದಿ ಹೀಗಾಯಿತು"

"ಅಂತಹ ಸುದ್ದಿ ಏನಿತ್ತು? ಯಾರಾದರೂ ಸತ್ತಿದ್ದರೆ? ಅಪಘಾತದ ಸುದ್ದಿ ಏನಾದರೂ ಇತ್ತೆ?"

"ಹಾಗೇನಿಲ್ಲ, ಪ್ರತಿಷ್ಠಿತ ಕ್ಲಬ್ ಒಂದರ ಸದಸ್ಯತ್ವದ ಇಂಟರ್‌ವ್ಯೂ ಪತ್ರ ಅದು. ಹತ್ತು ವರುಷಗಳಿಂದ ಈ ಪತ್ರಾನ ಇದಿರು ನೋಡುತ್ತಿದ್ದರು"



"ಸಾಹೇಬ್ರು ಸಸ್ಪೆಂಡಾಗವ್ರೆ, ಏನ್ಬೇಕೇಳಿ ಮಾಡ್ಕೊಡೋವ"

"ಬರ್ನಾಲಾ ಹಾಗೂ ಭಕ್ತರ ಬಾಟಾಶೂ"

—ಕಿಟ್ಟಿ

ಸುವರ್ಣ ಮಂದಿರಕ್ಕೆ ಪೋಲಿಸ್ ನುಗ್ಗಿಸಿದುದಕ್ಕಾಗಿ ಬರ್ನಾಲರಿಗೆ ಸಿಖ್ ಅರ್ಚಕರು ಪಾದರಕ್ಷೆ ಪಾಲೀಶ್ ಶಿಕ್ಷೆ ವಿಧಿಸಿದ್ದಾರೆ. ಬೂಟಾಸಿಂಗ್‌ಗೆ ಕೇಂದ್ರ ಗೃಹಮಂತ್ರಿಯಾಗಿ ಬಡ್ತಿ ದೊರೆತರೂ ಸುರ್ಜಿತ್‌ಸಿಂಗ್‌ಗೆ ಬೂಟ್ ಪಾಲೀಶ್ ತಪ್ಪಲಿಲ್ಲ.

ಈ ಬಗ್ಗೆ ಬರ್ನಾಲರೇನೂ ಸಂಕೋಚಪಟ್ಟುಕೊಳ್ಳಬೇಕಿಲ್ಲ. ಪಾದುಕೆಗಳನ್ನು ಪೂಜಿಸುತ್ತಾ ರಾಜ್ಯವಾಳಿದ ಭರತನ ಕಥೆ ಎಲ್ಲರಿಗೂ ಗೊತ್ತಿದೆ. ಈಗ ಭರತಖಂಡ ಒಡೆಯದಂತೆ ಪಾದರಕ್ಷೆ ಒರೆಸಲು ಒಪ್ಪಿಕೊಂಡ ಬರ್ನಾಲರು ಭರತನಿಗಿಂತ ಮೇಲೇರಿದ್ದಾರೆ.

ಚುನಾವಣೆಯ ಸಮಯದಲ್ಲಿ ಜನತೆಯ ಕಾಲು ಹಿಡಿದು ಓಟುಕೇಳಿ, ಗೆದ್ದ ಆನಂತರ ಜನತೆಯ ಕುತ್ತಿಗೆ ಹಿಡಿದು ಆಚೆ ದಬ್ಬುವ ರಾಜಕಾರಣಿಗಳು ಮಾಮೂಲಾಗಿರುವ ಈ ದಿನಗಳಲ್ಲಿ, ಗೆದ್ದು ಬಂದು ಮುಖ್ಯಮಂತ್ರಿಯಾಗಿಯೂ ಜನತೆಯ ಕಾಲು ಹಿಡಿಯಬೇಕಾದ ಪ್ರಸಂಗ ಖಾಲಿಸ್ತಾನಿಗಳಿಂದ ಬರ್ನಾಲರಿಗೆ ಒದಗಿದೆ.

ಬರ್ನಾಲರೇನೋ ತಮಗೆ ಕೊಟ್ಟ ಶಿಕ್ಷೆಯನ್ನು ಶಾಂತವಾಗಿ ಸ್ವೀಕರಿಸಿದ್ದಾರೆ. ಆದರೆ ಒಂದು ರಾಜ್ಯದ ರಾಜ್ಯಭಾರ ಮಾಡಬೇಕಾದವರು, ಒಂದು ವಾರ ಗುರುದ್ವಾರದಲ್ಲಿ ಕುಳಿತು ಚಪ್ಪಲಿ ಚೊಕ್ಕಟ ಮಾಡಿದರೆ, ಆಡಳಿತ ನಡೆಯುವುದು ಹೇಗೆ? ಕರ್ನಾಟಕದಲ್ಲಿ ಹೆಗಡೆಯವರು ಇತ್ತೀಚೆಗೆ ಆಸ್ಪತ್ರೆಯಲ್ಲೇ ಸಂಪುಟದ ಸಭೆ ಸೇರಿಸಿದಂತೆ ಬರ್ನಾಲರೂ ಮಾಡಬಹುದು. ಮಂತ್ರಿಗಳೆಲ್ಲರೂ ತಮ್ಮ ನಾಯಕನ ಜೊತೆ ಕುಳಿತು 'ಕಡತ ಯಜ್ಞ'ದ ರೀತಿ 'ಎಕ್ಕಡಯಜ್ಞ' ಮಾಡಬಹುದು. ಎಷ್ಟಾದರೂ ಮುಖ್ಯಮಂತ್ರಿಗಳ ಪೋಲಿಸ್ ಕಾರ್ಯಾಚರಣೆ ನಿರ್ಧಾರದಲ್ಲಿ ಅವರೂ ಜೋಡಿಯಾದ್ದರಿಂದ ಜೋಡು ಶುದ್ಧ ಮಾಡಿದರೆ ತಪ್ಪೇನಿಲ್ಲ. ಈ ಸಂಪುಟದ ಸಭೆ ಅತ್ಯಂತ ಶಾಂತ ರೀತಿಯಲ್ಲಿ ನಡೆಯುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಪ್ರತಿಯೊಬ್ಬರೂ ಕೈಯಲ್ಲಿ ಜೋಡುಗಳನ್ನು ಹಿಡಿದಿರುವುದರಿಂದ ಅತ್ಯಂತ ಸಂಯಮದಿಂದ ನಡೆದುಕೊಳ್ಳಲೇ ಬೇಕಾಗುತ್ತದೆ. ಮಂತ್ರಿಗಳಿಂದ ಕೆಲಸವಾಗಬೇಕಾಗಿರುವ ಭಕ್ತರು ಮಂತ್ರಿಗಳು ಪಾಲೀಶ್ ಮಾಡುತ್ತಿರುವ ಸಮಯದಲ್ಲಿಯೇ, ಅವರನ್ನು

ಪಾಲೀಶ್‌ಮಾಡಿ ತಮ್ಮ ಕಾರ್ಯ ಸಾಧಿಸಿಕೊಂಡರೆ, ಸ್ವಾಮಿ ಕಾರ್ಯ, ಸ್ವಕಾರ್ಯದ ಜೊತೆಗೆ ಶೂ ಶುದ್ಧೀಕರಣ ಕಾರ್ಯವೂ ಆದಂತಾಗುವುದು. ಈ ಪಾದರಕ್ಷೆ ಕ್ಲೀನ್ ಮಾಡುವುದರಿಂದ, ಬರ್ನಾಲರೂ ಇನ್ನೊಬ್ಬ ಮಿ॥ ಕ್ಲೀನ್ ಆಗುತ್ತಾರೆಯೇ ನೋಡ ಬೇಕು. ಭಕ್ತರು ಮುಖ್ಯಮಂತ್ರಿಗಳಿಂದ ಶುದ್ಧಿ ಮಾಡಿಸಿಕೊಂಡ ಶೂಗಳನ್ನು ಶೂಕೇಸಿನಲ್ಲಿಡದೇ ಶೋಕೇಸಿನಲ್ಲಿಡುತ್ತಾರೆಯೇ ಎಂಬುದನ್ನು ಕಾದು ನೋಡ ಬೇಕು.

ಸಾಧಾರಣವಾಗಿ ದೇವಾಲಯಕ್ಕೆ ಹೋದಾಗ, ದೃಷ್ಟಿ ದೇವರಮೇಲಿದ್ದರೂ, ಮನಸ್ಸು ಹೊರಗಡೆ ಬಿಟ್ಟು ಬಂದ ಚಪ್ಪಲಿಯ ಮೇಲೆರುತ್ತದೆ. ಆದರೆ ಗುರು ಧ್ವಾರದಲ್ಲಿ ಒಂದು ವಾರದವರೆಗೆ ಭಕ್ತರಿಗೆ ಯೋಚನೆ ಇಲ್ಲ. ಸ್ವತಃ ಮುಖ್ಯ ಮಂತ್ರಿಗಳೇ ನಿಗಾ ಮಾಡುವುದು ಮಾತ್ರವಲ್ಲ, ನಿಗಿನಿಗಿ ಹೊಳೆಯುವಂತೆ ಮಾಡುತ್ತಿರುತ್ತಾರೆ!

ಪಂಜಾಬಿನಿಂದ ಬಂದಿದೆ ಗೋಪು ಹೊಸ ಸುದ್ದಿ ।
ಮುಖ್ಯಮಂತ್ರಿಯಿಂದಲೇ ಚಪ್ಪಲಿಗಳ ಶುದ್ಧಿ ॥
ಜೊತೆಗೆ ಜಪತಪ ಹಾಗೂ ತೆರಬೇಕು ದಂಡ ।
ಎಂದು ಕೊನೆಗಾಣುವುದು ಈ ಕರ್ಮಕಾಂಡ ? ॥

ಮಾರ್ಗದರ್ಶಿ

ಸಿ. ಪಿ. ರಾಜೇಶ್

"ಸ್ವಾಮಿ! ಇಲ್ಲಿ ನರಸಿಂಹ ದೇವಸ್ಥಾನ ಎಲ್ಲಿದೆ ಅಂತ ತಿಳಿದಿದೆಯಾ?"
"ಇಲ್ಲ ಸ್ವಾಮಿ!"
"ಅದೇ ಕೋರ್ಟಿನ ಪಕ್ಕ ಇರುವುದು,
"ಊಹುಂ ಗೊತ್ತಿಲ್ಲ!"
"ಸುಧಾ ಬಾರ್"ನ ಬಳಿ ಇದೆಯೆಂದರಲ್ಲ.
"ಓಹೋ ಅದಾ, ಇಲ್ಲೇ ಹತ್ತಿರ ಇದೆ... ಬನ್ನಿ ತೋರಿಸುತ್ತೇನೆ"

ಪಂಚ ಕಲ್ಯಾಣಿ

ಜಿ.ಎಸ್.ಜಿ.

ಗಾಂಪ ಮಠದಲ್ಲಿ ಅನೇಕದಿನಗಳಿಂದ activity ನೇ ಇಲ್ಲ. ಸನ್ನಿಧಿಯ ಮತ್ತು ಶಿಷ್ಯವರ್ಗದ antics ಖ್ಯಾತಿ ಲೋಕ ಪ್ರಸಿದ್ಧವಾದ ಕಾಲವೊಂದಿತ್ತು. ಆದರೆ ಈಚೆಗೆ ಮಠ ಯಾಕೋ ಹಾಳು ಹಾಳು ಸುರಿಯುತ್ತಿತ್ತು.

ಗುರುಗಳಿಗೂ ಇದೇ ಯೋಚನೆ. ಹೀಗಾದರೆ ಮುಂದೇನು? ಪರಂಪರಾನುಗತವಾದ ಕೀರ್ತಿ ಉಳಿದೀತೆ? ಮಠಕ್ಕೆ ಏನಾಗಿದೆ? ಮರುಳನನ್ನು ಕರೆದರು. ಮರುಳ ಬಂದ-ಅಡ್ಡಬಿದ್ದು ಕೈ ಕಟ್ಟಿ ನಿಂತ. ಗುರುಗಳು ತಮ್ಮ ತಲೆಯ ಮೇಲೆ ಕೈಯಾಡಿಸುತ್ತಾ ಇಲ್ಲದ ಕೂದಲನ್ನು ಹುಡುಕುತ್ತಿದ್ದರು.

ಹಿಂದೆ ಒಂದು ಕಾಲದಲ್ಲಿ ಸೊಂಪಾಗಿ ಬೆಳೆದಿದ್ದ ತಲೆಯಿಂದ ಒಂದೊಂದೇ ಕೂದಲನ್ನು ಕಿತ್ತು—ಅದರ ಬೇರನ್ನು ತಮ್ಮ ದಂತ ಪಂಕ್ತಿಗಳ ನಡುವೆ ಸಿಕ್ಕಿಸಿ ಎಳೆದಾಗ —ಬ್ರಹ್ಮಾನಂದ ಪಡೆದು—ಸ್ಫೂರ್ತಿ ಉಕ್ಕಿ ಹರಿಯುತ್ತಿತ್ತು. ಹೀಗೆ ಬ್ರಹ್ಮಾನಂದದಿಂದ ಸ್ಫೂರ್ತಿಯನ್ನು ಪಡೆಯುವ—ಧಾಳಿಗೆ ಬಲಿಯಾಗಿ—ಕರ್ನಾಟಕದ ಕಾಡಿನಂತೆ—ತಲೆಯೂ ಬೋಳಾಗಿತ್ತು.

"ಗುರುಗಳೇ—ಅಲ್ಲೇನೂ ಉಳಿದಿಲ್ಲ ಖಾಲಿ"—ಎಂದ ಮರುಳ

"ಹೌದಯ್ಯಾ—ತಲೆಯೂ ತುಂಬಿತ್ತು—ಮಠವೂ ತುಂಬಿತ್ತು—ಅದು ಆ ಕಾಲ" ನಿಟ್ಟುಸಿರು ಬಿಟ್ಟರು ಗುರುಗಳು.

"ಒಂಥರಾ ಖಾಲಿ ಸ್ಥಾನ ಗುರುಗಳೇ"

"good ನಿನಗೂ ತಲೆ ಇದೆ"

ಮಾತು ಹೀಗೆ ನಾಗಿದ್ದಾಗ ಮಡ್ಡಿ ಒಳಕ್ಕೆ ಓಡಿಬಂದ. ಏದು ಉಸಿರು ಬಿಡುತ್ತಿದ್ದ.

"ಏನದು ಮಡ್ಡಿ

"ಹಾ—ಹಾ—ಸ್ವಲ್ಪ ಸುಧಾರಿಸಿ ಕೊಳ್ಳುತ್ತೇನೆ"

"ಸುಧಾರಿಸಿಕೋ"

"ಮತೆ–ಮತೆ–ಗುರುಗಳೇ–ಮುತ್ಯಾಲ ಶೆಟ್ಟರು ಈ ಕಡೇನೇ ಬರ್‍ತಾ ಇದಾರೆ"

"ಎಲ್ಲಿವಾರೆ?"

"ದೂರದಲ್ಲಿ"

"ಅವರೇ ಅಂತ ಹೇಗಯ್ಯ ಹೇಳುತ್ತಿ

"ಅವರ ಹಣೆಯ ಬರಹ ಗುರುಗಳೇ"

"ಅಂದರೆ'

"ಅದೇ ಅವರ ಹಣೆಯ ಬರಹ ಇಲ್ಲಿಗೆ ಕಾಣಿಸ್ತು

"ಗುರುಗಳೇ–ಮಡ್ಡೀದು Wonderful far sight ಶೆಟ್ಟರ ಪಟ್ಟೇನಾಮ ಕಂಡಿದ್ದಾನೆ' —ಎಂದ ಮರುಳ

"ದೂರದೃಷ್ಟಿ ಚೆನ್ನಾಗಿದೆ–ಪಾಪ! ದುರಾದೃಷ್ಟಿ ಎಂದರು ಗುರುಗಳು

"ಯಾರು ಗುರುಗಳೇ? ಮಡ್ಡಿ ಕೇಳಿದ

'ಮತ್ತಿನ್ಯಾರು ಅದೇ ಶೆಟ್ಟರು–ಎಲ್ಲಾ ಬಿಟ್ಟು ನಮ್ಮ ಮಠಕ್ಕೆ ಬರಬೇಕಾದರೆ?" ಮಂಕ ಒಳಕ್ಕೆ ಬರುತ್ತಾ ಎಂದ.

"ಮಂಕ ನೀನು ಯಾವಾಗಲೂ ಇಷ್ಟೆ–ಅಪಸ್ವರದ ಮುಂಡೇದು" —ಮಡ್ಡಿ ಎಂದ

"ಶೆಟ್ಟರು ಬಂದೇ ಬಿಟ್ಟರು" ಮಡೆಯ ಬಂದುತಿಳಿಸಿದ

"ಮುಟ್ಠಾಳನನ್ನು ಕಳಿಸು–ಕರೆದುಕೊಂಡು ಬರಲಿ' ಗುರುಗಳು ಅಪ್ಪಣೆ ಮಾಡಿ ಕಣ್ಣು ಮುಚ್ಚಿದರು.

ಗುರುಗಳು ಧ್ಯಾನ ಮುದ್ರೆಯಲ್ಲಿ ಕುಳಿತ್ತಿದ್ದಾರೆ. ಎಡಬಲದಲ್ಲಿ ಮರುಳ ಮಂಕ–ಕೈಕಟ್ಟಿ ನಿಂತಿದ್ದಾರೆ. ಮಡ್ಡಿ ಮಡೆಯ ಅವರ ಮುಂದೆ ವ್ಯಾಸಪೀಠ ಇರಿಸಿ-ಅದರಲ್ಲಿ ಪುಸ್ತಕವೊಂದನ್ನು ಇಟ್ಟಿದ್ದಾರೆ. ವ್ಯಾಸಪೀಠದ ಎಡಬಲದಲ್ಲಿ ಮಡ್ಡಿ

ಮಡೆಯು ಕಣ್ಣು ಮುಚ್ಚಿ ಕುಳಿತಿದ್ದಾರೆ. ಮುಂದುಗಡೆ ಚಾಪೆ ಹಾಸಿದೆ. ಮುಟ್ಠಾಳ ಶೆಟ್ಟರೊಡನೆ ಒಳಕ್ಕೆ ಬಂದಾಗ ಧ್ಯಾನಮಂದಿರದಲ್ಲಿ ಸ್ಮಶಾನ ಮೌನ.

ಶೆಟ್ಟರು ಬಂದರು-ಅಡ್ಡ ಬಿದ್ದರು–ಹಣ್ಣು–ಹೂ-ತುಂಬಿದ ತಟ್ಟೆಯನ್ನು ಗುರುಗಳ ಮುಂದೆ ಇಟ್ಟು ತಾವು ಕಣ್ಣು ಮುಚ್ಚಿ ಕುಳಿತರು.

ರಸಪುರಿ ಮಾವಿನ ಹಣ್ಣಿನ ಕಂಪು ಮಡೆಯುನ reflexes ಬಲು ಚುರುಕು ಕ್ಷಣಾರ್ಧದಲ್ಲಿ ಕಣ್ಣು ಬಿಟ್ಟು ಒಂದು ಹಣ್ಣನ್ನು ಮಡಿಲಿಗೆ ಸೇರಿಸಿ ಕಣ್ಣು ಮುಚ್ಚಿದ ಮಡ್ಡಿ ತಾನು ಚುರುಕು ಎಂಬುದನ್ನು ತೋರಿಸಿಕೊಟ್ಟ.

ಗುರುಗಳು ಕಣ್ಣು ಬಿಟ್ಟರು.

"ಮಡೆಯೂ-ಮಡ್ಡಿ-ಫಲಸ್ವಾಹಕ್ಕೆ ಏಕೆ ಇಷ್ಟು ಆತುರ-ಮೊದಲು ಫಲ ಸಮರ್ಪಣೆಯಾಗಬೇಕು- ಇತ್ತಕೊಡಿ' ಎಂದರು ಗುರುಗಳು.

ಈಗ ಶೆಟ್ಟರು ಕಣ್ಣು ಬಿಟ್ಟರು.

"ಗುರುಗಳೇ ಅಡ್ಡಬಿದ್ದೆ ಕಂಡೆ ಗುರುಗಳೇ ಕಂಡೆ"

ಮಡೆಯು-ಮಡ್ಡಿ ಗಾಬರಿ ಯಾದರು-ಮರುಳನಿಗೆ ಅವಕಾಶಸಿಕ್ಕಿತು.

"ಕಂಡೇ ಬಿಟ್ಟಿರಾ ಶೆಟ್ಟರೇ - ನಾನು ಬಡ್ಕೊಂಡೆ ಇವರಿಗೆ-ನಿಮಗಿನ್ನೂ ತರಬೇತಿ ಸಾಲದೂ ಅಂತ ಎಲ್ಲಿ ಕೇಳ್ತಾವೆ ದಡ್ಡ ಮುಂಡೇವು"-ಎಂದು ರೇಗಿದ ಮರುಳ

ಗುರುಗಳೇ ಕಂಡೆ ತಮ್ಮ ಧ್ಯಾನ ಮುದ್ರೆಯ ದಿವ್ಯ ತೇಜಸ್ಸನ್ನು ಕಂಡೆ-ಏನು ಖಳೆ ತಿರುಮಲ ನನ್ನೇ ಕಂಡಂತಾಯಿತು ಧನ್ಯ ಗುರುಗಳೇ- ಧನ್ಯ"ಎಂದರು ಶೆಟ್ಟರು.

ಮಡೆಯ ಮಡ್ಡಿ ಬದುಕಿದೆವು ಎಂದು ಕೊಂಡು ಮರುಳನ ಕಡೆ ಕಣ್ಣು ಮಿಟುಕಿಸಿದರು.

ಗುರುಗಳು ಏನು ಶೆಟ್ಟರು ಅಪರೂಪಕ್ಕೆ ಬೆಳಗಿನಲ್ಲೇ ಮಠಕ್ಕೆ ದಯ ಮಾಡಿಸಿ ಬಿಟ್ಟಿರಿ ಅದೂ ಪೂಜೆ ಮುಗಿಸಿ ನಾಮ ಹಾಕಿಕೊಂಡು........."

ಮರುಳ ಬೇರೆ ಯಾರೂ ಸಿಕ್ಕಲಿಲ್ಲಾ ಎಂದು - ಅವರೇ ಹಾಕಿ ಕೊಂಡು ಬಂದಿದ್ದಾರೆ ಗುರುಗಳೇ"

ಶೆಟ್ಟರು "ನಾನು ಬೆಳಿಗ್ಗೆ ಹಾಕದೇ ಎಲ್ಲೂ ಹೊರಡೋದೇ ಇಲ್ಲ"

ಮಡೆಯ "ಗುರುಗಳೇ ಶೆಟ್ಟರು ಬೆಳಿಗ್ಗೇನೇ ಹಾಕಿದಾರೆ ಹುಷಾರಾಗಿರ ಬೇಕು"

ಗುರುಗಳು "ಮಡೆಯಾ ತಮಾಷೆ ಬೇಡ–ಅವರು ಹೇಳುತ್ತಾ ಇದ್ದದ್ದು ನಾಮದ ವಿಚಾರ"

ಮಂಕ "ಬೆಳಿಗ್ಗೆ ಯಾರೂ ಸಿಕ್ಕಲಿಲ್ಲಾ ಎಂದು ಮಠಕ್ಕೆ ಬಂದಿದ್ದಾರೆ ಮಠದ ಪುಣ್ಯ ಗುರುಗಳೇ"

ಮರುಳ "ದಡ್ಡನಹಾಗೆ ಮಾತನಾಡಬೇಡ ಮಂಕ–ಶೆಟ್ಟರು ಮಠದ ಹಳೆಯ ಶಿಷ್ಯರು–ಗುರುಗಳು ಪರದೇಶಿಯಾದಾಗ"

ಮಡೆಯ : ಈಗ ನೀನು ದಡ್ಡ ಮರುಳ–ನಿಮ್ಮ ಗುರುಗಳಿಗೆ ಪರದೇಶಿ ಎನುತ್ತೀ–ಪರದೇಶಕ್ಕೆ ಹೋಗಿದ್ದಾಗ ಎನ್ನು

ಮರುಳ ಅದೇ-ಅದೇ ಬಹಿ ರ್ದೇಶಕ್ಕೆ ಹೋಗಿದ್ದಾಗ

ಮಡ್ಡಿ ನಿನ್ನ ತಲೆ-ವಿದೇಶಕ್ಕೆ ಎನ್ನೂ

ಮರುಳ ಯಾವುದೋ ಒಂದು ದೇಶಕ್ಕೆ-ಆಗ ಶೆಟ್ಟರು ತಾನೆ ಧನ ಸಹಾಯ ಮಾಡಿದ್ದು.

ಶೆಟ್ಟರು ಹಾಗನ್ನು-ಹಾಗನ್ನು

ಗುರುಗಳು ಏನು ಶೆಟ್ಟರೇ-ಕಾರಣವಿಲ್ಲದೇ ನೀವು ಮಠಕ್ಕೆ ಬರುವುದಿಲ್ಲ

ಶೆಟ್ಟರು ಇದೆ ಇದೆ-ನನ್ನ ಮಗ ತಿರುಮಲ ಮುಖ್ಯಮಂತ್ರಿಯಾಗ ಬೇಕೂ ಎನ್ನುತ್ತಾನೆ.

ಮಂಕ ಈಗ ಏನಾಗಿದಾನೆ

ಮಡೆಯ ಏನಾಗ್ತಾನೆ ಮದುವೆ

ಗುರುಗಳು ನೀವು ಸುಮ್ನಿರಿ

ಶೆಟ್ಟರು ಗುರುಗಳೇ ಅವನು ಎಂ.ಎಲ್.ಎ. ಆಗಿದ್ದಾನೆ

ಮರುಳ   ಹಾಗಿದ್ದರೆ ಇಲ್ಲಿಗೆ ಯಾಕೆ ಬಂದಿರಿ-ಭಾಸ್ಕರರಾಯರನ್ನು ಕಾಣೆ-ಪ್ಲಾನು ಹೇಳಿಕೊಡ್ತಾರೆ.

ಮಡ್ಡಿ   ಬ್ಯಾಡ-ಭಜನಲಾಲರನ್ನು ಕಾಣೆ.

ಗುರುಗಳು   ಸುಮ್ನಿರಿ-ಶೆಟ್ಟರು ಶರಣಾಗತರಾಗಿ ಬಂದಾಗ ಅವರಿಗೆ ಸೂಕ್ತ ವಾದ-ಶಾಶ್ವತೆ ಸುಖ ಕೊಡುವ ಸಲಹೆ ಕೊಡಬೇಕು.

ಮರುಳ ಮಡ್ಡಿ   ಅದನ್ನೇ ನಾವು ಕೊಟ್ಟದ್ದು.

ಮಂಕ   ಅಷ್ಟೂ ಗೊತ್ತಿಲ್ಲೇನ್ರೋ ನಿಮಗೆ-ಈಗ ಭಜನಲಾಲರು ಭಜನೆ ಮಾಡ್ತಿದಾರೆ ಭಾಸ್ಕರಾಯರ ಅಡ್ರಸ್ಸೇ ಇಲ್ಲ—ಅದಕ್ಕೆ ಶೆಟ್ರು ಮಠಕ್ಕೆ ಬಂದಿರೋದು.

ಗುರುಗಳು :   ಶೆಟ್ಟರೇ ಮಗ ಮುಖ್ಯಮಂತ್ರಿಯಾಗಬೇಕು-ನಿಮಗೆ ಅಲ್ಲವೇ ?

ಶೆಟ್ಟರು   ಹೌದು ಗುರುಗಳೇ—ಅದಕ್ಕೆ ಯಾವುದಾದರೂ ಶಾಂತಿ ಹೋಮ ಇದ್ದರೆ-ತಿಳಿಸಿ ಎಷ್ಟಾರು ಖರ್ಜಾಗಲಿ.

ಗುರುಗಳು ಕಣ್ಣು ಮುಚ್ಚಿದರು-ಕೈ-ತಲೆಯ ಮೇಲೆ ಹೋಯಿತು. ಸಹರಾ ಮರುಭೂಮಿಯಲ್ಲಿ ಹುಲ್ಲು ಹುಡುಕಿದಂತೆ-ಕೈ ಕೂದಲನ್ನು ಹುಡುಕುತ್ತಿತ್ತು. ಗುರುಗಳು-ತದೇಕ ಚಿತ್ತರಾಗಿ—ಆ ಕಾಯಕವನ್ನು ನಡೆಸುತ್ತಿದ್ದಾಗ-ಶಿಷ್ಯರು ಮೌನ ದಿಂದ ಇದ್ದರೆ ಬದುಕಿದರು-ಇಲ್ಲದಿದ್ದರೆ ಗುರುಗಳ ಕೋಪ ಬ್ರಹ್ಮರಂಧ್ರಕ್ಕೇ ರುತ್ತಿತ್ತು.

ಇದ್ದಕ್ಕಿದ್ದಂತೆ ಗುರುಗಳು

"ಹಾ-ಸಿಕ್ಕಿತು"-ಎಂದರು.

"ಗುರುಗಳೇ-ಸಿಕ್ಕಿತೇ-ಏನು ?—ಏನು ?" ಶೆಟ್ಟರು ಕಾತುರತೆಯಿಂದ ಕೇಳಿದರು.

"ಏ ಸುಮ್ನಿರ್ರಿ-ಗುರುಗಳಿಗೆ ಸಿಕ್ಕಿದ್ದು ಕೂದಲು-ಮೂರು ದಿನದಿಂದ ಒಂದೇ ಸಮನೇ ಹುಡುಕುತ್ತಾ ಇದ್ದರು-ಸಿಕ್ಕಿರಲಿಲ್ಲ-ನಿಮ್ಮ ಅದೃಷ್ಟ ಇವತ್ತು ಸಿಕ್ಕಿತು-ಬದುಕಿದಿರಿ-ನಿಮ್ಮ ಮಗ ಮಂತ್ರಿಯಾದ ಎಂದೇ ತಿಳಿಯಿರಿ" ಎಂದ ಮರುಳ.

ನಿಧಾನವಾಗಿ-ಎರಡು ಬೆರಳುಗಳಿಂದ ಕೂದಲನ್ನು ಹಿಡಿದು ಕಿತ್ತು-ಬೇರನ್ನು ಬಾಯಲ್ಲಿಟ್ಟು-ಹಲ್ಲುಗಳ ನಡುವೆ ಸಿಕ್ಕನೆ ಎಳೆದು "ಆಹಹಾ" ಎಂದು ಆನಂದಸಿ

ಆಕಳಿಸಿ ಕಣ್ಣು ಬಿಟ್ಟರು ಗುರುಗಳು.

"ಶೆಟ್ಟರೇ ನಿಮ್ಮ ಮಗ ಮುಖ್ಯಮಂತ್ರಿಯಾದ ಎಂದು ತಿಳಿಯಿರಿ"

"ಭಗವಂತಾ-ಅದಕ್ಕೇ ನಾನು ಇಲ್ಲಿಗೆ ಬಂದದ್ದು ಗುರುಗಳೇ-ಈಗ ಏನು ಮಾಡಬೇಕು ?"

"ಯಾಗ-ಮಹಾ ಯಾಗ"

"ಎಂಥಾ ಯಾಗ ಗುರುಗಳೇ"

"ಹಿಂದೆ-ರಾಜರುಗಳು-ಚಕ್ರವರ್ತಿಗಳು-ಮಾಡುತ್ತಿದ್ದ ಅಶ್ವಮೇಧ ಮಹಾ ಯಾಗ"

"ಅದಕ್ಕೆ ಎಷ್ಟು ಖರ್ಚಾಗಬಹುದು ಗುರುಗಳೇ"

"ಶಿಷ್ಯ–ಮರುಳು-ಲೆಖ್ಖ ಕೇಳ್ತಾರೆ ಶೆಟ್ಟರು"

"ಶೆಟ್ಟರೇ-ನಿಮ್ಮ ಮಗ ಮುಖ್ಯಮಂತ್ರಿಯಾಗಬೇಕಾದರೆ ಖರ್ಚಿಗೆ ಹಿಂದು ಮುಂದು ನೋಡಬಾರದು-ಮಂತ್ರಿಯಾದ ಮೇಲೆ-ನಿತ್ಯ ಯಾಗ ಮಾಡ್ತಾರೆ ಜನ-ನಿಮ್ಮ ಮಗನಿಗೇ ಹವಿಸ್ಸು ಅಗ" ಎಂದ ಮರುಳ.

"ಇದು ಮಹಾ ಯಾಗ- ಪಂಚ ಕಲ್ಯಾಣಿಯನ್ನು ತರಿಸಿ ದೇಶಾಂತರ ಪರ್ಯಟನೆ ಮಾಡಿಸಿ-ಹೋಮ ಮಾಡಿದರೆ-ಆಗ ನಿಮ್ಮ ಮಗ ಖಂಡಿತಾ ಮಂತ್ರಿಯಾದ ಎಂದೇ ತಿಳಿಯಿರಿ" ಎಂದರು ಗುರುಗಳು.

"ಈಗ ಏನಾಗಬೇಕು ಗುರುಗಳೇ"

"ಸಧ್ಯಕ್ಕೆ ಮೊದಲು ಪಂಚ ಕಲ್ಯಾಣಿ ಬರಲಿ-ನಂತರ ಮುಂದಿನ ಕೆಲಸ"

"ಗುರುಗಳೇ ಪಂಚಕಲ್ಯಾಣೀ ನಾನು ತರಲೇ" ಕೇಳಿದ ಮಂಕ.

"ಶುಧ್ಧ ತರಲೆ ಇವನು ಗುರುಗಳೇ, ಹಿಂದೆ ಕುದುರೆ ಮೊಟ್ಟೆ ತಂದದ್ದು ಗೊತ್ತಿದೆಯಲ್ಲಾ-ಅವನು ಬೇಡ-ಬೇರೆ ಯಾರಾದರೂ ಸರಿಯಾದವರನ್ನು ಕಳಿಸಿ" ಎಂದ ಮಡೆಯ.

"ಶೆಟ್ಟರೇ-ಪಂಚ ಕಲ್ಯಾಣಿ ತರಲು ಕಾಥೇ ವಾಡಕ್ಕೆ ಹೋಗಬೇಕು-ಸರಿಯಾಗಿ

ಆರಿಸಿ ತರಬೇಕು" ಎಂದರು ಗುರುಗಳು.

"ಅಂದರೆ"

"ಅಂದರೆ-ಒಂದಿಪ್ಪತ್ತೈದು ಸಾವಿರ-ಖರ್ಚಾಗುತ್ತೆ-ಮುಟ್ಠಾಳ ಲೆಖ್ಖ ಇಡ್ತಾನೆ ಜಾಣ"-ಎಂದರು ಗುರುಗಳು.

ಕೊನೆಗೆ-ಸಧ್ಯಕ್ಕೆ ಶೆಟ್ಟರು ಇಪ್ಪತ್ತು ಸಾವಿರ ಕೊಡುವುದೆಂದೂ-ಮುಟ್ಠಾಳನನ್ನು ಕಾಥೇವಾಡಕ್ಕೆ ಕಳಿಸುವುದೆಂದೂ ತೀರ್ಮಾನವಾಯಿತು.

ಶೆಟ್ಟರು ಹೋದಮೇಲೆ-ಸಂಪ್ರದಾಯದಂತೆ-ಗುರು ಶಿಷ್ಯರ ಸಭೆ ಸೇರಿತು-ಗುರುಗಳು ಮುಟ್ಠಾಳನಿಗೆ.

"ತಕೋ ಹತ್ತು ಸಾವಿರ—ದೂರ ಹೋಗಬೇಡ—ಕುಣಿಗಲ್‌ಗೆ ಹೋಗು—ಸಾಕು —ಅಲ್ಲೇ ಯಾವುದಾನ ವಯಸ್ಸಾದ್ದನ್ನು ಆರಿಸು—ಬೆಲೆ ಕಡಿಮೆ" ಎಂದರು.

ಮುಟ್ಠಾಳ ಹೋದ ನಂತರ—ಮಠಕ್ಕೆ ಸುಣ್ಣ ಬಣ್ಣ ಹೊಡೆಸಿದರು. ಗುರುಗಳು ರೇಶಿಮೆ ವಸ್ತ್ರದೊಡನೆ ಮಿಂಚುತ್ತಿದ್ದರು.

ಮಠ ಮುಟ್ಠಾಳನ ಹಾದಿ ಕಾಯುತ್ತಿತ್ತು. ಆಸಾಮಿ ಹೋದವನು ತಿಂಗಳಾದರೂ ಪತ್ತೆ ಇಲ್ಲ. ಶೆಟ್ಟರು ಆಗಲೇ ಆರು ಸಲ ಬಂದು ಹೋಗಿದ್ದರು.

ಗುರು ಶಿಷ್ಯರು ಚಿಂತಾಕ್ರಾಂತರಾಗಿದ್ದರು.

"ಹಾಳಾದವನು ಒಂದು ಕಾಗದ ಹಾಕಬೇಡವೇ? ಎಂದ ಮರಳ.

"ಒಬ್ಬನ್ನೇ ಕಳಿಸಬಾರದಿತ್ತು ಎಂದ ಮಂಕ.

"ದುಡ್ಡು ಕೊಟ್ಟು ಕಳಿಸಬಾರದಿತ್ತು ಎಂದ ಮಡ್ಡಿ

'ದುಡ್ಡಿಲ್ಲದೇ ಬರುತ್ತೇನೋ ಕಲ್ಯಾಣಿ" ಎಂದ ಮಡೆಯ.

"ಶಾಂತಿ-ಶಾಂತಿ-ಬರ್‍ತಾನೆ ಬರದೇ ಎಲ್ಲಿ ಹೋಗ್ತಾನೆ" ಎಂದರು ಗುರುಗಳು

"ಅವನು ಹೋದರೆ ಹೋಗಲಿ ಹಾಳಾದ್ದು ದುಡ್ಡು ಗುರುಗಳೇ ದುಡ್ಡು" ಎಂದ ಮರುಳ.

"ಮನಸ್ಸಿನಲ್ಲಿದ್ದುದನ್ನು ಆಡಿ ತೋರಿಸಬಾರದು ಮರುಳಾ" ಎಂದರು

ಗುರುಗಳು

"ಹಾಗಾದರೆ-ನಿಮ್ಮ ಮನಸ್ಸಿನಲ್ಲಿದ್ದದು ನನಗೂ ಗೊತ್ತಾಯಿತು ಗುರುಗಳೇ" ಎಂದ ಮಂಕ.

"ಅದಿ ತೋರಿಸಬೇಡ ಎಂದು ಹೇಳಿಲ್ಲೇನೋ ಗುರುಗಳು" ಎಂದ ಮಡೆಯ

ಈ ಸ್ನೂಪ್ ನಡೆಯುತ್ತಿದ್ದಾಗ ದೂರದಲ್ಲಿ ಮರದ ಕಡೆಗೆ ಆಟೋ ರಿಕ್ಷಾ ಬರುವುದು ಕಾಣಿಸಿತು.

"ಗುರುಗಳೇ ಆಟೋ ಎಂದ ಮಂಕ"

"ಕಾಣುತ್ತೆ-ಗುರುಗಳಿಗೆ ಕಾಣುತ್ತೆ" ಎಂದ ಮಡೆಯ

ಆಟೋ ಮರಕ್ಕೇ ಬಂತು. ಆಟೋದಿಂದ ಇಳಿದ ಮುಟ್ಠಾಳ. ಒಂದು ಗಂಟು ಹೊತ್ತಿದ್ದಾನೆ-ಜೊತೆಗೆ ಒಬ್ಬ ಸುಂದರಿ ಬೇರೆ,

ಗುರು-ಶಿಷ್ಯರಿಗೆ ತಬ್ಬಿಬ್ಬಾಯಿತು. ಮುಟ್ಠಾಳ ಬಂದವನೇ ಗುರುಗಳಿಗೆ ಅಡ್ಡ ಬಿದ್ದ.

"ಹೋದ ಕೇಸ್ ಹಣ್ಣೋ ಕಾಯೋ?" ಕೇಳಿದರು ಗುರುಗಳು.

"ನಾ ಹೋದ ಮೇಲೆ ಹಣ್ಣೇ ಗುರುಗಳೇ ಹಣ್ಣೆ"

"ಮತ್ತೆ ಇದೇನು ಹೆಣ್ಣು?"

"ಸ್ವಲ್ಪ ನಿಧಾನ ಗುರುಗಳೇ-ಮೊದಲು ಈ ಗಂಟು ಒಪ್ಪಿಸಿ ಕೊಳ್ಳಿ"

"ಏನದು?"

"ಅದೇ ನೀವು ಹೇಳಿದ್ದು"

"ಪಂಚ ಕಲ್ಯಾಣಿ ಎಲ್ಲಯ್ಯಾ?" ರೇಗಿದರು ಗುರುಗಳು

"ಅದೇ ಗುರುಗಳೇ-ಗಂಟಿನಲ್ಲಿರೋದು ಮೇಲು ಕೋಟೆ ಪಂಚೆ—ಇವಳೇ ಕುಣಿಗಲ್-ಕಲ್ಯಾಣಿ-ಆಯಿತಲ್ಲಾ ಪಂಚೆ—ಕಲ್ಯಾಣಿ-ಹ್ಯಾಗಿದ್ದಾಳೆ—ಕಲ್ಯಾಣಿ?"

ಗುರುಗಳು ಸುಸ್ತಾಗಿ ಗೋಡೆಗೆ ಒರಗಿದಾಗ-ಮರುಳಗಾಳಿ ಹಾಕುತ್ತಿದ್ದ-ಮಂಕ ಗುರುಗಳ ನೆತ್ತಿಗೆ ನೀರು ತಟ್ಟುತ್ತಿದ್ದ. ○

ಕೋಳಿ ಕಾಲಿಗೆ ಗೆಜ್ಜೆ

(ಆಧುನಿಕ ಜಾನಪದ)

—ಎಸ್. ಹಾಲಪ್ಪ

ಕೋಳಿ ಕಾಲಿಗೆ। ಗೆಜ್ಜೆ ಕಟ್ಟೀದ್ರೆ।
ತಿಪ್ಪೇ ಕೆದ್ರೋದ್। ಬಿಟ್ಟೀತಾ॥
ನಾಯಿಬಾಲಕೆ। ದಬ್ಬೆ ಕಟ್ಟೀದ್ರೆ।
ಡೊಂಕೇನಾದ್ರೂ। ಬಿಟ್ಟೀತಾ॥

ಕತ್ತೆ ನೆತ್ತಿಗೆಣ್ಣೆ ಹಾಕಿದ್ರೂ।
ಮಣ್ಣಾಗುಲ್ಡೋದ್। ಬಿಟ್ಟೀತಾ?॥
ಬೆಣ್ಣೆಬಾವುಗ್। ಉಣ್ಣಾಕಿಟ್ರೂ।
ಬೆಣ್ಣೆ ಕದಿಯೋದ್। ಬಿಟ್ಟೀತಾ?॥

ಕುರುಡನಕೈಗೆ। ಬಂಡಿಕೊಟ್ರೆ।
ದಾರೀಲಾದ್ರೂ ಒಡೀತ?॥

ಪ್ಯಾಲಿ ಕೈಯಾಗ। ತಾಲೀಕೊಟ್ರೆ।
ತಾಲೀನಾದ್ರೂ ಮುರಿಸೀತ॥
ಪಾಲೀನಾದ್ರೂ ಮಾಡಿಸಿತ।

ಬುದ್ದೀಗೇಡಿಗೆ। ವಿದ್ಯೆಕೊಟ್ರೆ।
ಮುದ್ದೀನಾದ್ರೂ ಬಿಟ್ಟೀತು।
ನಿದ್ದೇನಾದ್ರೆ ಬಿಟ್ಟೀತ?॥

24

ಪ್ರತಿಕಿಯಾ ಮೀಮಾಂಸೆ

ಭುವನೇಶ್ವರಿ ಹೆಗಡೆ

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗಿನ ಮಾತು. ನಮ್ಮ ವಿಜ್ಞಾನದ ಮೇಷ್ಟ್ರು ನ್ಯೂಟನ್ನನ ಚಲನೆಯ ನಿಯಮಗಳನ್ನು ಪಾಠ ಮಾಡುತ್ತಿದ್ದರು. ಪ್ರತಿಯೊಂದು ಕ್ರಿಯೆಗೂ ಅದಕ್ಕೆ ಸಮಾನಾದ ಆದರೆ ವಿರುದ್ಧವಾದ ಪ್ರತಿಕಿಯೆ ಇರುತ್ತದೆ ಎಂಬ ನಿಯಮದ ವಿವರಣೆ ನಡೆದಿತ್ತು. ಕ್ಲಾಸಿನಲ್ಲಿ ಶಿಕ್ಷಕರಿಗೆ ಪ್ರಶ್ನೆ ಕೇಳುವ ಘಟಿಂಗ ಎಂದು ಹೆಸರಾಗಿದ್ದ ಹುಡುಗನೋರ್ವ ಎದ್ದು ನಿಂತು ಕ್ರಿಯೆಯಿಲ್ಲದೆಯೆ ಪ್ರತಿಕ್ರಿಯೆ ಉಂಟಾಗಲು ಸಾಧ್ಯವೆ ಸಾರ್? ಎಂದು ಕೇಳಿದ್ದ. ಮೇಷ್ಟ್ರರಿಗೆ ಸಿಟ್ಟು ಬಂದರೂ ತೋರಿಸಿಕೊಳ್ಳದೆ ನ್ಯೂಟನ್ನನಿಗಿಂತ ಹೆಚ್ಚು ಆತ್ಮ ವಿಶ್ವಾಸದಿಂದ ಸಾಧ್ಯವೆ ಇಲ್ಲ ಅಂದರಲ್ಲದೇ ಬೋರ್ಡಿನ ಮೇಲೆ 'ಪ್ರತಿಕ್ರಿಯೆ' ಎಂದು ಬರೆದು 'ಕ್ರಿಯೆ' ಎಂಬು ವನ್ನು ಒರೆಸಿ ತೆಗೆದು ನೋಡಿ ಕ್ರಿಯೆ ಇಲ್ಲದೆಯೆ ಪ್ರತಿಕ್ರಿಯೆ ಉಂಟಾಗಲು ಸಾಧ್ಯವೇ ಇಲ್ಲ ಎಂದು ವಿವರಿಸಿದಾಗ ನಾವೆಲ್ಲ ಆಶ್ಚರ್ಯದಿಂದ ತಲೆದೂಗಿದ್ದೆವು.

ಚಿಕ್ಕವಳಿದ್ದಾಗಿನ ಈ ಘಟನೆ ಮರೆತು ಹೋಗಿರಲಿಲ್ಲವಾದರೂ ಮಾಸಿ ಹೋಗಿತ್ತು. ನೆನಪಾಗಿದ್ದು ಮೊನ್ನೆ. ರವಿವಾರವಾದ್ದರಿಂದ ಬೆಳಿಗ್ಗೆ ಎದ್ದು ಕಾಫಿ ಕುಡಿದವಳು ಕುರ್ಚಿಯ ಮೇಲೆ ಒಂದರ್ಧ ಘಂಟೆ ಸುಮ್ಮನೆ ನಿಷ್ಕ್ರಿಯಳಾಗಿ ಅಲು ಗಾಡದೆ ಕುಳಿತಿದ್ದೆ. ಎಲ್ಲಿದ್ದಳೋ ನನ್ನ ಸಹವಾಸಿಣಿ ನಳಿನಾಕ್ಷಿ ಬಂದಳು ತಕ್ಷಣವೇ ಬಂತು ಬರಸಿಡಿಲಿನಂತಾ ಅವಳ ಪ್ರತಿಕ್ರಿಯೆ "ಅಗ್ಲಿಂದಾ ಸಪ್ಪಳವಿಲ್ಲದ್ದನ್ನು ನೋಡಿ ಕಕ್ಕಸಿಗೆ ಹೋಗಿ ಕೂತಿದೀಯ ಅಂದ್ಕೊಂಡೆ ನೋಡಿದ್ರೆ ಇಲ್ಲಿ ಖುರ್ಚಿ ಮೇಲೆ ಜೋಕಾಲಿ ಆಡೋ ತರಾ ಕೂತಿದ್ದಾಳೆ. ಏಳು ಭಾನುವಾರ ಇವತ್ತು ನೀನೇ ಅಡಿಗೆ ಮಾಡು ....ಹೀಗೆ ಒಂದೇ ಸಲ ಒಮ್ಮೆಲೆ ನನಗೆ ಮೇಷ್ಟ್ರರು ಕಲಿಸಿದ್ದರಲ್ಲಿ ಖಂಡಿತ ತಪ್ಪಿರಬೇಕೆಂಬ ಸಂಶಯ ಜಾಗ್ರುತವಾಯ್ತು.

ಸಾಮಾನ್ಯವಾಗಿ ನಾನು ನನ್ನ ರೂಮ್ಮೇಟಿಣಿಯಾದ ನಳಿನಾಕ್ಷಿಯ ಪ್ರತಿಕ್ರಿಯೆ ಗಳಿಗೆ 'ಆನ್‌ಡ್ಯೂ ಮಹತ್ವ ಕೊಡುವುದಿಲ್ಲ. ನಾನು ಏನೇ ಅನ್ನಲಿ ಮಾಡಲಿ ಕೊನೆಗೆ ನೋಡಲಿ ಅವಳ ಅಧಿಕಾರೀ ಪ್ರತಿಕ್ರಿಯೆ ಹಾಜರ್ ಎಂದೇ ತಿಳಿಯಬೇಕು ಆದರೆ ಆವತ್ತು ನಾನು ಸತ್ಯವಾಗಿಯೂ ಯಾವ ಕ್ರಿಯೆಯನ್ನು ಮಾಡಿರದಿದ್ದರೂ ನಳಿನಾಕ್ಷಿ ಯಿಂದ ಅಂತಹ ಪ್ರತಿಕ್ರಿಯೆ ಬಂದಿದ್ದು ಹೇಗೆ? ನ್ಯೂಟನ್ ತನ್ನ ನಿಯಮದ ಮುಂದೆ (ಕೆಲವು ಖಾಸಗಿ ಸಂದರ್ಭಗಳು ಅಪವಾದಾತ್ಮಕ) ಎಂದು ಸೇರಿಸಿದರೆ ಒಳ್ಳೆ

ಯದಿತ್ತು ಎನಿಸುತ್ತದೆ. ಇಷ್ಟು ಸಣ್ಣ ವಿಚಾರ ಅಷ್ಟು ದೊಡ್ಡ ವಿಜ್ಞಾನಿಗೆ ಏಕೆ ತಿಳಿಯಲಿಲ್ಲವೋ ಅಥವಾ ಅವನಿಗೆ ಒಬ್ಬ ಅಧಿಕಾರೀ ಪ್ರತಿಕ್ರಿಯಾತ್ಮಕ ಹೆಂಡತಿ ಯಿರಲಿಲ್ಲವೋ. ನ್ಯೂಟನ್ ನನಗೇನಾದರೂ ಭೆಟ್ಟಿಯಾದರೆ ಅವನ ಮುಂದೆ ನಾನಿಡುವ ಸಂದೇಹ ನಂ. 1 ಇದು.

ಇನ್ನು ಸಂದೇಹ ನಂ. 2 ಅಂದರೆ ಕ್ರಿಯೆ ಇದ್ದೂ ಪ್ರತಿಕ್ರಿಯೆ ಇರದ ಸಂದರ್ಭಗಳು. ಇಲ್ಲೂ ನ್ಯೂಟನ್ ಸ್ವಲ್ಪ ಎಡವಟ್ಟು ಮಾಡಿದ್ದಾನೆ. ತನ್ನ ನಿಯಮವನ್ನ ಬರೆಯುವಾಗ ಪ್ರತಿಕ್ರಿಯೆಯಿಲ್ಲದ ಕ್ರಿಯೆಗಳನ್ನ ಲಕ್ಷಕ್ಕೇ ತೆಗೆದುಕೊಂಡಿಲ್ಲ ಆತ. ನೀವು ಕಾಲೇಜಿನ ಅಥವಾ ಯೂನಿವರ್ಸಿಟಿಯ ವಿದ್ಯಾರ್ಥಿಗಳಾಗಿದ್ದರೆ ಅಥವಾ ನಿಮ್ಮ ಮಕ್ಕಳನ್ನ ಓದಿಸುತ್ತಿದ್ದರೆ ಅಥವಾ ಯಾವದೇ ಸರ್ಕಾರಿ ಹಣವನ್ನ ನೀವು ಪಡೆಯುತ್ತಿದ್ದರೆ ನನ್ನ ಈ ಹೇಳಿಕೆ ನಿಮಗೂ ಅನುಭವಕ್ಕೆ ಬಂದಿರಬಹುದು. ನಾನು ಬಿ.ಎ. ಪಾಸಾದಾಗ ನಿಮಗೆ ಮೆರಿಟ್ ಸ್ಕಾಲರ್‌ಶಿಪ್ ಕೊಡಲ್ಪಟ್ಟಿದೆ ಎಂದು ಅಧಿಕೃತವಾಗಿ ತಿಳಿಸಲಾಯ್ತು. ಆದರೆ ನನ್ನ ಎಂ.ಎ. ಮುಗಿದರೂ ಅದರ ಹಣ ನನ್ನ ಕೈ ಸೇರಲಿಲ್ಲ. ಆ ಹಣವನ್ನ ಪಡೆಯಲಿಕ್ಕೋಸುಗ ನಾನು ಮಾಡಿದ ಕ್ರಿಯೆಗಳು ಲೆಕ್ಕವಿಲ್ಲದಷ್ಟು ಉದಾ : ಸ್ಕಾಲರ್‌ಶಿಪ್ ಆಫೀಸಿಗೆ ಅಲೆಯುವದು ಅಲ್ಲಿಯವರಿಗೆ ಸಲಾಂ ಹೊಡೆದು ಕೇಳುವದು, ಮಣ್ಣು ಮಸಿಯಷ್ಟ ಇವರಿಗೆಲ್ಲ ಈ ಕುರಿತು ಪತ್ರ ಬರೆಯುವದು ಪೋಸ್ಟ್ ಮಾಡುವದು ಅದರ ಪ್ರತಿಕ್ರಿಯೆಗಾಗಿ ಕಾಯುವದು......ಹೀಗೆ ಒಂದಲ್ಲ ಎರಡಲ್ಲ. ನಾನು ಮಾಡಿದ ಪ್ರತಿಯೊಂದು ಕ್ರಿಯೆಗೂ ನ್ಯೂಟನ್ನ್‌ನ ನಿಯಮದಂತೆ, ಒಂದೊಂದು ಪ್ರತಿಕ್ರಿಯೆ ಬರುವದು ಹಾಳಾಗಲಿ ಎಲ್ಲದಕ್ಕೂ ಸೇರಿ ಒಂದಾದರೂ ಪ್ರತಿಕ್ರಿಯೆ ಇನ್ನೂ ತನಕ ಬಂದಿಲ್ಲ. ಕಣ್ಣೆದುರು ಗೋಚರವಾಗುವ ಸತ್ಯದ ವಿರುದ್ಧವಾಗಿ ಹೇಗೆ ತಾನೆ ನಂಬುವದು ಈ ನಿಯಮಗಳನ್ನೆಲ್ಲ?

ಕ್ರಿಯೆ ಗೋಚರವಾಗದೆ ಕೆಲವೊಮ್ಮೆ ಪ್ರತಿಕ್ರಿಯೆ ಗೋಚರಿಸುವದುಂಟು. ನನ್ನ ತಮ್ಮ ಮಹಾ ಕೋಪಿಷ್ಠ ಬುಸು ಬುಸು ಎನ್ನುವ ಆತ ನನ್ನ ಮಾತನ್ನಂತೂ ಎಂದೂ ಕೇಳಿದ್ದಿಲ್ಲ. ಹೀಗಿದ್ದವ ಒಂದು ಮುಂಜಾನೆ ಮುಖದ ತುಂಬಾ ತೆಳುನಗೆ ಲೇಪಿಸಿಕೊಂಡು ಮಂದಸ್ಮಿತನಾಗಿ ನನ್ನೆದುರು ಸುಳಿದಾಡ ತೊಡಗಿದ. ಟೂರಿಗೆ ಹೋಗಲು ಹಣ ಕೇಳಬಹುದೆಂದು ನಾಲ್ಕು ದಿನ ಕಾದೆ. ಇಲ್ಲ! ನಂಬಲೋ ಬೇಡವೋ ಅನ್ನಿಸಿದರೂ ದಿನವೂ ಆತ ಹಾಗೆಯೇ ಇರತೊಡಗಿದ್ದನ್ನು ಕಂಡು ದಿಗಿಲಾಯ್ತು. ಇಂತಹ ದಿಢೀರ್ ಬದಲಾವಣೆಯ ಪ್ರತಿಕ್ರಿಯೆಗೆ ಕಾರಣವಾದ ಕ್ರಿಯೆ ಯಾದರೂ ಏನಿರಬಹುದುದೆಂದು ದಿನವೂ ವಿಚಾರಿಸಿದರೂ ಉತ್ತರ ಹೊಳೆಯುವಂತಿರಲಿಲ್ಲ. ದಿನ ದಿನಕ್ಕೆ ಕುತೂಹಲ ಹೆಚ್ಚ ತೊಡಗಿ ಕೊನೆಗೆ ಗತಿಯಿಲ್ಲದೆ ಅವನ

—ನೀವು ಕೋಪಗೊಂಡಾಗ ನಿಮ್ಮ ನರಮಂಡಲದಲ್ಲಿಯ 27 ಸ್ನಾಯುಗಳಿಗೆ ಶ್ರಮವಾಗುತ್ತವೆ. ನೀವು ಮುಗಳ್ನಕ್ಕಾಗ ಕೇವಲ 7 ಸ್ನಾಯುಗಳು ಕೆಲಸ ಮಾಡುತ್ತವೆ ಆದರೆ ಅವಕ್ಕೆ ಶ್ರಮವಾಗುವದಿಲ್ಲ.

ಆತ ಇದನ್ನ ಎಲ್ಲಿಂದಲೇ ಓದಿರಲಿ ಆ ಪುಸ್ತಕಕ್ಕೆ ಮನಸ್ಸಿನಲ್ಲೇ ವಂದಿಸಿ ಡೈರಿ ಮುಚ್ಚಿಟ್ಟೆ.


ಇನೇ ರೀತಿ ನನ್ನ ತಲೆಯನ್ನು ಕೆಡಿಸಿರುವ ಇನ್ನೊಂದು ವಿಚಾರವೆಂದರೆ 'ಜಡತ್ವದ ನಿಯಮ' ಪಠ್ಯ ಪುಸ್ತಕದವರ ಪ್ರಕಾರ "ಬಲ ಪ್ರಯೋಗವಾಗುವ ತನಕ ಎಲ್ಲ ಭೌತ ವಸ್ತುಗಳೂ ತಾವಿರುವ ಸ್ಥಿತಿಯಲ್ಲಿಯೇ ಉಳಿಯುತ್ತವೆ. ಭೌತ ವಸ್ತುಗಳ ಈ ಗುಣವನ್ನ ಜಡತ್ವ ಎಂದು ಕರೆಯುತ್ತಾರೆ......

ನಾವು ಪ್ರಯಾಣ ಮಾಡುತ್ತಿರುವ ಬಸ್ಸು ಇದ್ದಕ್ಕಿದಂತೆ ನಿಂತರೆ ನಾವು ಮುಂದಕ್ಕೆ ಮುಗ್ಗರಿಸುತ್ತೇವೆ ಏಕೆ ? ಎಂಬುದು ಎಲ್ಲ ಜನರಲ್ ನಾಲೆಡ್ಜ್ ಪರೀಕ್ಷೆಯಲ್ಲೂ ಕೇಳುವ ಪ್ರಶ್ನೆ. ಚಲಿಸುವ ಬಸ್ಸಿನೊಂದಿಗೇ ಚಲಿಸುವ ನಮಗೂ ಜಡತ್ವವಿರುವದರಿಂದ ಬಸ್ಸು ನಿಂತರೂ ನಾವು ನಿಂತಿರುವದಿಲ್ಲ. ನಮ್ಮ ಚಲನೆಯ ಸ್ಥಿತಿಯಲ್ಲೇ ಇರುತ್ತೇವೆ. ಆಗ ನಾವು ಮುಗ್ಗರಿಸುತ್ತೇವೆ. ನಾವು ಇರುವ ಸ್ಥಿತಿಯಲ್ಲಿಯೇ ಉಳಿಯಬೇಕಾದರೆ ಮುಗ್ಗರಿಸುವದನ್ನು ತಪ್ಪಿಸಿಕೊಳ್ಳಬೇಕಾದರೆ ಬಸ್ಸು ಚಲಿಸುವ ವಿರುದ್ಧ ದಿಕ್ಕಿನಲ್ಲಿ ಬಲವು ಉತ್ಪತ್ತಿಯಾಗುವಂತೆ ನಮ್ಮ ಮಾಂಸಖಂಡಗಳನ್ನು ಉಪಯೋಗಿಸಬೇಕಾಗುತ್ತದೆ.

ಇದು ಪುಸ್ತಕ ನಮಗೆ ಕೊಡುವ ವಿವರಣೆ, ಈ ನಿಯಮವನ್ನು ಓದಿದಾಗಿನಿಂದ ನಾನು ಎಂದೂ ಬಸ್ಸಿನಲ್ಲಿ ನಿರಾತಂಕವಾಗಿ ಪ್ರಯಾಣಿಸಲೂ ಸಾಧ್ಯವಾಗುತ್ತಲೇ ಇಲ್ಲ. ಯಾವಾಗ ಡ್ರೈವರನು ಬ್ರೇಕ್ ಹಾಕುತ್ತಾನೋ ಎಷ್ಟು ಹೊತ್ತಿಗೆ ನಾನು ನನ್ನ ಮಾಂಸಖಂಡಗಳಿಗೆ ಸ್ವಿಚ್ ಹಾಕಬೇಕಾಗುತ್ತದೆಯೋ ಎಂಬ ಎಚ್ಚರದಲ್ಲಿಯೇ ನನ್ನ ಬಸ್ಸು ಪ್ರಯಾಣ ಮುಗಿದು ಹೋಗಿರುತ್ತದೆ.

ಅನೇಕ ವೇಳೆ ಎಷ್ಟು ಎಚ್ಚರದಿಂದಿದ್ದರೂ ಎಡವಟ್ಟಾಗಿದ್ದುಂಟು. ಎಷ್ಟೋ ಸಲ ಕಿಟಕಿಯ ಆಚೆ ಕಾಣುವ ದೃಶ್ಯವನ್ನು ನನ್ನ ಪಕ್ಕದಲ್ಲಿ ಕುಳಿತ ನಳಿನಾಕ್ಷಿಗೆ ತೋರಿಸಬೇಕೆಂಬ ವ್ಯರ್ಥ ಆಸೆ ಉಂಟಾಗುವದುಂಟು. ಪಕ್ಕದಲ್ಲಿ ನಿಶ್ಚಲ ನಿದ್ರಿತ ಸ್ಥಿತಿಯಲ್ಲಿ ಗೊರೆಯುವ ಭೌತ ವಸ್ತುವನ್ನು-ಬಲ ಪ್ರಯೋಗ ಮಾಡಿ ಚಲನೆಯ ಸ್ಥಿತಿಗೆ ತರುವದೇನೂ ಸುಲಭದ ಕೆಲಸವಲ್ಲ, ಅದಕ್ಕೆ ಪ್ರತಿಕ್ರಿಯೆಯಾಗಿ ಬರುವ ಅವಳ ಡೈರಿಗೆ ಶರಣು ಹೋದೆ. ಅವನ ಕೋಪ ಮಾಯವಾದ ದಿನಾಂಕದ ಹಿಂದಿನ ದಿನದ ಪೇಜನ್ನು ತೆರೆದು ನೋಡಿದಾಗ ಹೀಗೆಂದು ಬರೆದಿತ್ತು.

ದುರು ದುರು ನೋಟದ ವೇಗೋತ್ಕರ್ಷವನ್ನು ಅಳತೆ ಮಾಡಲು ಹೋಗಿ ಡ್ರೈವರನನ್ನು ಗಮನಿಸದೇ ಸಾಕಷ್ಟು ಸಲ ಭಾನ್ಗಡಿಯಾಗಿದೆ. ನನಗೆ ಗೊತ್ತಿಲ್ಲದೇ ಅವನು ಬ್ರೇಕ್ ಹಾಕಿ ನಿಲ್ಲಿಸಿಬಿಟ್ಟ ಮೇಲೆ ವಿರುದ್ಧ ದಿಕ್ಕಿನಲ್ಲಿ ಬಲ ಪ್ರಯೋಗ ಮಾಡಲು ಮಾಂಸಖಂಡಗಳಿಗೆ ಆಜ್ಞೆ ಕೊಡುವಷ್ಟರಲ್ಲಿ ಬ್ರೇಕಿನ ಪ್ರಯೋಗ ನಡೆದುಬಿಟ್ಟು ನಾನು ಮುಂದಿನ ಸೀಟಿಗೂ ನಂತರ ಹಿಂದಿನ ಕಬ್ಬಿಣದ ಪಟ್ಟಿಗೂ ತಲೆ ಬಡಿಸಿಕೊಂಡಿದ್ದುಂಟು. ಹಾಗೆ ಬಡಿಸಿಕೊಂಡು ನೋವಾದಾಗಲೆಲ್ಲ ನನಗೆ ಚಲನ ಶಾಸ್ತ್ರದ ಜನಕನೆನಿಸಿಕೊಂಡಿರುವ ನ್ಯೂಟನ್ನನ ಮೇಲೆ ಅಸಾಧ್ಯ ಕೋಪ ಬರುವದುಂಟು. ನನ್ನ ಹಾಗೆ ಅವನ ನಿಯಮಗಳ ಕುರಿತು ತಲೆ ಕೆಡಿಸಿಕೊಳ್ಳಲೇ ಆರಾಮಾಗಿ ಸೀಟಿಗೊರಗಿ ಕುಳಿತ ನಳಿನಾಕ್ಷಿಯನ್ನು ಕಂಡಾಗ ನ್ಯೂಟನ್ನನಿಗೆ ಹೊಳೆಯದಿದ್ದ, ಜಡತ್ವದಿಂದಾಗುವ ಅಪಾಯವನ್ನು ತಪ್ಪಿಸುವ ಉಪಾಯವೊಂದನ್ನು ತನಗೇ ಗೊತ್ತಿಲ್ಲದೆಯೇ ಈಕೆ ಅಳವಡಿಸಿಕೊಂಡಿದ್ದಾಳಲ್ಲ ಎಂದು ಹೊಟ್ಟೆಕಿಚ್ಚಿನಿಂದ ಹೊಟ್ಟೆ ಉರಿದು ಹೋಗುತ್ತದೆ ನನಗೆ.



ಒಂದ್ಘಂಟೇಯಿಂದ ಕ್ಯೂನಲ್ಲಿ ಕಾಯ್ತಾ ಇದೀನಿ ಟೋಕನ್ನಿಟ್ಕೊಂಡು, ದುಡ್ಡು ಕೊಡ್ತೀಯೋ ಇಲ್ವೋ?

Strange Encounter (of the nth Kind!)

ಕಮಲಾ ರಾಮಸ್ವಾಮಿ

"ತುಂಬಾ ಹುಷಾರಾಗಿ ಇರ್ಬೇಕು ಕಣೆ! ಒಬ್ಳೇ ಹೊರಟಿದ್ದೀ, ಜೊತೆಗೆ ಈ ಕಪಿಂಗಿ ಬೇರೆ"

"ಆಗ್ಲಿ ಅಣ್ಣಾ, ಹುಷಾರಾಗಿರ್‍ತೀನೆ"

"ಏನು ಮಾಡ್ತಿಯೋ! ಕಾಣದ ದೇಶ, ಭಾಷೆ ಬರದು. ಅಲ್ಲೆಲ್ಲಾ ಕಣ್‍ಬಿದ್ರೆ ಕಣ್ಣುಮಾಯ ಮಾಡಿ ಸಾಮಾನು ಹಾರಿಸ್ಕೊಂಡು ಹೋಗ್ತಾರೆ. ಹತ್ತುಭುಜ, ಹದಿನಾರು ಕಣ್ಣು ಮಾಡ್ಕೊಂಡು ಜೋಪಾನವಾಗಿ ಇರ್ಬೇಕು. ಯಾರನ್ನೂ ನಂಬ ಬೇಡ"

"ಸರ್ರಿಯಪ್ಪಾ! ಇಲ್ಲಿ ಕೂರಿಸ್ತೀರಿ. ಮದ್ರಾಸಿನಲ್ಲಿ ಪಾಪಣ್ಣ ಬರ್ತಾನೆ. ಸೀದಾ ಕಲ್ಕತ್ತಾಗೆ ಹೋಗ್ತೀನಿ. ಸ್ಟೇಷನ್ನಿಗೆ ಬರ್‍ತೀನಿ ಅಂತ ಇವ್ರಿಂದ ಟೆಲಿಗ್ರಾಂ ಬಂದಿದೆ ಯಲ್ಲಾ "ಸರಿ-ಸರಿ ಅಲ್ಲೆಲ್ಲಾ ಅಸಾಧ್ಯ ಟ್ರಾಫಿಕ್ ಜಾಮ್ ಆಗುತ್ತೆ. ಅವನ್ಗೆ ಸರಿ ಯಾದ ಸಮಯಕ್ಕೆ ಬರಕ್ಕೆ ಆಗ್ದೆ ಇದ್ರೆ"

ಅಣ್ಣನಿಗೆ ಮೊದಲಿಂದಲೂ ಪ್ರಯಾಣ ಅಂದ್ರೆ ಸಾಕು-ವಿಪ್ರೀತ ಆತಂಕ, ಭಯ ನನ್ನ ಮೊದಲ ಬಾರಿಗೆ ಕಲ್ಕತ್ತಾಗೆ ಕಳುಹಿಸಬೇಕಾದಾಗ ನಡೆದ ಮಾತುಕತೆ.

ಒಂದು ವಾರದಿಂದ ಈ ಹಿತೋಪದೇಶ ಕೇಳಿ ಕೇಳಿ ನನಗೆ ನನ್ನಲ್ಲಿ ಇದ್ದ Self-Confidence ಕಮ್ಮಿಯಾಗಿ ಭಯ ಶುರುವಾಯ್ತು, ಬೆಂಗಾಲಿ ಬರಲ್ಲ. ಜೊತೆಗೆ ಎರಡು ವರ್ಷದ ತುಂಟಿ ಪುಟ್ಟೀ ಬೇರೆ, ಬಹಳ ಜಾಗರೂಕತೆಯಿಂದ, ಎಲ್ಲಾ ಸಾಮಾನೂ ಸಾಗಿಸಿಕೊಂಡು ಕಲ್ಕತ್ತಾ ತಲಪಿದೆ.

ಪ್ಲಾಟ್‍ಫಾರಂ ತುಂಬಾ ಜನ ಸಮುದ್ರ, ಇವ್ರನ್ನ ಹ್ಯಾಗೆ ಗುರ್‍ತಿಸ್ಲೀ? ಇರ್‍ಲಿ: ನಿಧಾನವಾಗಿ ಇಳಿದು-ಸಾಮಾನೆಲ್ಲಾ ಇಳಿಸಿಕೊಂಡು ಆಮೇಲೆ ನೋಡೋಣ ಅಷ್ಟು ಹೊತ್ತಿಗೆ ಇವ್ರ ಮುಖ ಕಂಡ್ತು. ಕೈ ಬೀಸಿದೆ, ಬಂದ್ರು;ಸಧ್ಯ ಗೆದ್ದೆ ಎಂದ್ಕೊಂಡು ಇಳಿದೆ, ಇವ್ರ ಸಾಮಾನಿಳಿಸಿ, "ಸಾಮಾನೆಲ್ಲಾ ಸರ್‍ಯಾಗಿ ಎಣಿಸ್ಕೊ ಇಲ್ಲೇ ಇರು, ಮೂರ್ತಿ ಬಂದಿದಾನೆ ಕಾರ್ ತಗೊಂಡು ಆ ಕಡೆ ಹುಡುಕ್ತಾ ಇದ್ದಾನೆ. ಕರಕೊಂಡು ಬರ್‍ತೀನಿ. ಜೋಪಾನ! ಪುಟ್ಟಿ ಕೈ ಬಿಡಬೇಡ"

“ಆಗ್ಲಿ ಅಲ್ಲೇ ನಿಂತುಕೊಂಡೆ. ಯಾಕೆ ಕಲ್ಕತಾನ “ಮಹಾನಗರ” ಅಂತಾರೆ ಅಂತ ಈಗ ಗೊತ್ತಾಯ್ತು. ಸ್ವಲ್ಪ ಗದ್ದಲ ಕಮ್ಮಿಯಾಗ್ತಾ ಬಂತು.

ನನ್ನ ತೀರ ಹತ್ತಿರಕ್ಕೆ, ಒಬ್ಬ ಬಂದು ನಿಂತ. ಬಿಳಿ ಪಾಯಿಜಾಮ, ಜುಬ್ಬಾ, ತೋಳಿಗೆ ಜಯಾಭಾದುರಿ ಚೀಲ, ನೀಳವಾಗಿದ್ದ ತಲೆಗೂದಲನ್ನ ಹಿಂದಕ್ಕೆ ಬಾಚಿ ಬಿಟ್ಟಿದ್ದ. ಬಹಳ ಪರಿಚಯವಿದ್ದವರ ಹಾಗೆ ನಸುನಗುತ್ತಾ, ಹಿಂದಿಯಲ್ಲಿ ಕೇಳಿದ “ನಿಂಬೂ ಚಾಹಿಯೇ ಕಮಲಾ” (ನಿಂಬೆ ಬೇಕೆ ಕಮಲ?)

ನನಗೆ ಕೆಟ್ಟ ಗಾಬರಿ ಆಯ್ತು, ಮೈ ಬೆವರಿ ಮುಖ ಕೆಂಪೇರಿತು. ಇಷ್ಟು ಬೇಗ ನನ್ನ ಹೆಸ್ರು ಇವ್ನಿಗೆ ಹ್ಯಾಗೆ ಗೊತ್ತಾಯ್ತು? "ದೇವರ ದಯೆ! ಇವರು ಬಂದ್ರು ನೋಡಿ ಇವನ್ನ!" ಎಂದೆ.

“ಯಾಕೆ ಏನಾಯ್ತು? ಎಂದ್ರು ಅವನ್ನ “ಕ್ಯಾ ಹೈ” (ಏನು?) ಎಂದ್ರು, ಮತ್ತೇ ಅವನು “ನಿಂಬೂ ಚಾಹಿಯೇ, ಕಮಲಾ?” ಎಂದ. “ನಹೀ ಚಾಹಿಯೇ” ಅಂದ್ರು. ಮೂರ್ತಿ ನನ್ನ ಮುಖ ನೋಡಿ ನಕ್ಕು ಹೇಳಿದ್ರು "ಈ ಕಡೆ ಕಿತ್ತಳೆ ಹಣ್ಣಿಗೆ ಕಮಲಾ ನಿಂಬೂ ಅಂತಾರೆ. ಅದಕ್ಯಾಕೆ ಇಷ್ಟು ಭಯ”



“ಟಿಹಾರ್ ಜೈಲಾದರೂ ಆಗಿದ್ರೆ .. ..

ಪಾತ ಓದೋಣ

—ಲೀಲಾ ಮಿರ್ಲೆ

ನಮ್ಮ ಸ್ಮಿತಾ ಬ್ಯಾಂಕಲ್ಲಿ ಕೆಲಸಮಾಡ್ತಾಳೆ. ಅವಳಿಗೆ ಮದ್ರಾಸಿಗೆ ವರ್ಗ ವಾಯಿತು.

'ಸ್ವಲ್ಪವು ತಮಿಳು ಬರದ ನಾನು, ಅಲ್ಲಿ ಹ್ಯಾಗ್ ನಿಭಾಯಿಸೋದು' ಅಂತ ಅವಳಿಗೆ ಒಂದೇ ಯೋಚನೆ.

'ಅಷ್ಟ್ಯಾಕ್ ಯೋಚನೆ ಮಾಡ್ತಿ, ಇದಿರು ಬೀದೀಲಿ ಆ ವೇದಾಂತಾಚಾರ್ ಇದಾರಲ್ಲಾ, ಅವರ ಹತ್ತಿರ ತಮಿಳು ಕಲತ್ಕೊ ಎಂದೆ.

ಸ್ಮಿತಾ ವೇದಾಂತಾಚಾರ್ ಬಳಿ ಹೋದಳು, ತಮಿಳು ಕಲಿಸಲು ಎಪ್ಪತ್ತರ ಆ ಹಿರಿಯರು ಸಂತೋಷವಾಗಿ ಒಪ್ಪಿಕೊಂಡರು, ನಾಲ್ಕು ದಿನ ಬಹಳ ಹುಮ್ಮಸ್ಸಿನಿಂದ ಹೋಗಿ ಬಂದಳು ಸ್ಮಿತಾ, 'ಅಯ್ಯೊ. ತಮಿಳು ಕನ್ನಡದ ಹಾಗೇ. 'ಹ' ಗೆ 'ಪ' 'ಬಿ' 'ಬ' ಬದಲು 'ವ' ಉಪಯೋಗಿಸಿದರೆ ತಮಿಳಾಗುತ್ತೆ. ಎಂದೆಲ್ಲಾ ಹೇಳಿದಳು.

ಒಂದು ವಾರದ ನಂತರ ಪಿಚ್ಚು ಮುಖ ಹಾಕಿ ಕೊಂಡು ಬಂದ್ಲು ಸ್ಮಿತಾ, ತಮಿಳು ಕ್ಲಾಸಿನಿಂದ.

'ಏನಾಯ್ತು ಎಂದೆ.

'ವಾದ್ಯಾರು. ಪಾತ ಸಾಕಮ್ಮ, ಮದ್ರಾಸಿಗೆ ಹೋದ್ ಮೇಲೆ ತಮಿಳು ತಾನೇ ಬರುತ್ತೆ, ಅಂದ್ರು ಅಂತ ಅಂದ್ಲು.

'ಯಾಕೆ ಫೀಸ್ ಬಾಬತ್ತೇನಾದ್ರು ಅಸಮಾಧಾನವಾಯಿತೆ ಅವರಿಗೆ' ಎಂದೆ.

'ಇಲ್ಲಾ ಎಂದ್ಲು.

'ಮತ್ತೇ'

ಟ್ರಾನ್ಸ್ಲೇಶನ್ನಿಗೆ ಒಂದು ವಾಕ್ಯ ಕೊಟ್ರು, ನಾನು ಮಾಡಿದೆ. ನನ್ನ ಅನು ವಾದ ಕೇಳಿ ಅವರು ಬೆಚ್ಚಿ ಬಿದ್ದು, 'ನಿನಗೆ ತಮಿಳು ಕಲಿಸೋದು ಸ್ವಲ್ಪ ಆಭಾಸವೇ,

ಅಲ್ಲೆ ಕಲತ್ಕೊ' ಅಂದ್ರು

'ಅವರು ಏನ್ ಕೇಳದ್ರು, ನೀನ್ ಏನ್ ಹೇಳ್‌ದೆ' ಎಂದೆ

'ನಾವೀಬ್ಬರೂ ಓದೋಣ' ಅನ್ನೊ ವಾಕ್ಯಕ್ಕೆ

'ನಾಂಗಳ್ ರೊಂಡಪೇರೂ ಪಡತಕಲಾ' ಎಂದೆ, ಅಂದ್ನ್ಲ !



"ನಿರುದ್ಯೋಗ ಸಮಸ್ಯೆಗೆ ಸುಲಭ ಪರಿಹಾರ, ಬೆಳಗಾಂ, ಚಲೋ"

ಸಿಕ್ ಲೀವು

—ಸೂರಿ

ಮೂರು ಇನ್‌ಕ್ರಿಮೆಂಟ್ ಬರುತ್ತೆ, ನಾಕು ಇನ್‌ಕ್ರಿಮೆಂಟ್ ಬರುತ್ತೆ ಅಂತೆಲ್ಲ ಆಸೆಯಿಂದ ಸಂಬಳದ ಕವರನ್ನ ತೆಗೆದು ನೋಡಿದ ಅಯ್ಯಂಗಾರಿಗೆ ಸಿಕ್ಕಿದ್ದು–ಮೂರು ನಾಮಾನೆ. ಮೂರೋ ನಾಕೋ ಇರಲಿ ಬರಬೇಕಾಗಿದ್ದ ಮಾಮೂಲಿ ಇನ್‌ಕ್ರಿ ಮೆಂಟ್‌ಗೇ ಧೋಕಾ. ಸಮಜಾಯಿಷಿ ರೂಪದಲ್ಲಿ ಒಂದು ಕಾಗದಾ ಬೇರೆ ಸಾಲದ್ದಕ್ಕೆ– ಕಂಪೆನೀ ಹಣಕಾಸಿನ ಪರಿಸ್ಥಿತಿ ಅಷ್ಟು ಸಮಾಧಾನಕರವಾಗಿಲ್ಲ. ಅದ ರಿಂದಾಗಿ ಮಾಮೂಲಿ ಇನ್‌ಕ್ರಿಮೆಂಟುಗಳನ್ನ ಕೊಡೋಕ್ಕೆ ಆಗಿಲ್ಲ. ನೀವು ಅರ್ಥ ಮಾಡ್ಕೋತೀರ ಅಂತ ನಮ್ಮ ನಂಬಿಕೆ" ಅಂತ–ಒಳ್ಳೇ ಸುಟ್ಟಗಾಯದ ಮೇಲೆ ಸಾಂಬಾರ್ ಪುಡಿ ಸವರೋ ಥರಾ.

ಥತ್ ಈ ಲಕ್ಷಣಕ್ಕೇನಾ ತಾನು ಹೋದ ಹನ್ನೆರಡು ತಿಂಗಳೂ ಹಗಲೂ ರಾತ್ರಿ ಅನ್ನದೆ ದುಡಿದದ್ದು ? ಆ ವರ್ಕ್ಸ್ ಮ್ಯಾನೇಜರ್ ಮೂರ್ತಿರಾವ್ ತಾನೆ ಆಯಿತು, ಏನೆಲ್ಲಾ ಪುಸಲಾಯಿಸಿ ಕತ್ತೇ ಕೆಲಸ ಮಾಡಿಸಿಕೊಂಡಿದ್ದ ! you do your best, Mr. Iyengar ಮಿಕ್ಕಿದ್ದನ್ನ ನಾನು ನೋಡ್ಕೊಂತೀನಿ" ಅಂತಲ್ಲವೇ ಅವನು ಹೇಳ್ತಾ ಇದ್ದದ್ದು ? ಆ ಮಾತುಗಳಿಗೆ ಮರುಳಾಗಿ ತನ್ನ best ಅನ್ನೇನೋ ಮಾಡಿದ್ದಾಗಿತ್ತು ಆದ್ರೆ, ಮೂರ್ತಿರಾವ್ ?–ಹೂ, ಅವನೂ ಕೂಡ ಮಿಕ್ಕಿದ್ದನ್ನ ನೋಡ್ಕೊಂಡಿದ್ದ ತನ್ನ ಸ್ವಂತ ಪ್ರಮೋಷನ್ನನ್ನ, ಡೀಜೀಎಂ ಪದವೀಗೆ.

ಇಷ್ಟೆಲ್ಲಾ ಆದಮೇಲೆ ಅವತ್ತು ಇನ್ನು ಕೆಲಸಾ ಮಾಡೋಕ್ಕೆ ಮೂಡ್ ತಾನೇ ಹೇಗೆ ಇರತ್ತೆ ? ಸರಿ, ಸೈರನ್ ಕೂಗೋದಕ್ಕಿಲ್ಲ, ಟಿಫಿನ್ ಕ್ಯಾರಿಯರನ್ನೂ ಎತ್ಕೊಂಡು ಮನೇಗೆ ಹೊರಟ, ಗಡಿಗೇ ಮುಖಮಾಡ್ಕೊಂಡು.

ಮಾರನೆ ಬೆಳಿಗ್ಗೆ ಎದ್ದಾಗ ನಿತ್ಯದಂತೆ ಲವಲವಿಕೇ ಇರಲಿಲ್ಲ. ಏನೋ ಯಾವುದು ಮಾಡೋಕ್ಕೂ ಒಂದ್ ಥರಾ ಬೇಜಾರು. ಸರಿ, ಹೇಗೂ ಒಂದು ಹೊರೆ ರಜಾ ಇದ್ಯೆಲ್ಲಾ. ಒಂದು ದಿನಾ ಚಕ್ಕರ್ ಹಾಕಿದ್ರಾಯಿತು ಅಂದ್ಕೊಂಡು ಕಾಫೀ ಕುಡಿ ದೋನೇ ಮತ್ತೆ ಬಿದ್ಕೊಂಡ.

ಆದ್ರೆ ಅವನು ಫ್ಯಾಕ್ಟ್ರೀನ ಬಿಟ್ಟರೂ ಅವನ್ನ ಫ್ಯಾಕ್ಟರೀ ಬಿಡಬೇಕಲ್ಲ. ಒಂಭತ್ತೂವರೇಗೆಲ್ಲಾ ಕಂಪನೀ ಡ್ರೈವರ್ ಆರ್ಮುಗಂ ಜತೇಲಿ ಚೀಟಿ ಕಳುಹಿಸಿದ

ಮೂರ್ತಿರಾವ್ ಯಾವದೋ ಸುಡುಗಾಡು ಮೆಷಿನ್ನು ಕೆಟ್ಟು ಕೂತಿದೆ, ಅರ್ಜಂಟಾಗಿ ಬರಬೇಕೂ ಅಂತ.

ಅಯ್ಯಂಗಾರಿಗೆ ಪಿತ್ತ ನೆತ್ತೀಗೇರಿತು. ಅಲ್ಲ, ಮೆಷಿನ್ನು ಕೆಟ್ಟು ಹೋದಾಗ ಮಾತ್ರಾ ಅಲ್ಲವೇ ತನ್ನ ಜ್ಞಾಪ್ಕಾ ಬರತ್ತೆ, ಈ ನನ್ಮಕ್ಕಳಿಗೆ. ಆದ್ರೇ ಅದೇ ಇನ್‌ಕ್ರಿಮೆಂಟ್ ಕೋಡೋ ಕಾಲಾ ಬಂದಾಗ? ಸರೀ ಮಾಡ್ತೇನೆ ಇವರ್ಗೆ ಅಂದೋನೆ; "ಮೈನಲ್ಲಿ ಸಖತ್ ಖಾಯಿಲೆ ಇನ್ನಾ ನಾಕೈದು ದಿನಾ ಬರೋ ಹಾಗಿಲ್ಲ" ಅಂತ ವಾಪಸ್ಸು ಬರೆದು ಕಳುಹಿಸಿದ.

ಸ್ವಲ್ಪ steam let off ಆದಾಗೆ ಹಾಗಿ, ಮನಸ್ಸಿಗೆ ಸಮಾಧಾನ ಆಯಿತು, ಸ್ವಲ್ಪ ಗಡದ್ದಾಗೇ ಊಟ ಮಾಡಿ ಮತ್ತೆ ಮುಸುಕು ಹಾಕಿಕೊಂಡು ಮಲಕ್ಕೊಂಡ.

ಒಳ್ಳೇ ನಿದ್ದೇ ಬಂದಿದೇ ಅನ್ನೋ ಹೊತ್ತಿಗೆ ಹಾಳು ರಾಘವ ಬಂದು ಎಬ್ಬಿಸಿದ–"ನಿಮ್ಮ ಬಾಸ್ ಮೂರ್ತಿರಾಯರು ಬಂದಿದ್ದಾರೆ, ಸಾರ್. ನಿಮ್ಮನ್ನ ನೋಡೋಕ್ಕೆ ಒಳಕ್ಕೆ ಬರೋಣವೇ ಅಂತ ಕೇಳ್ಕೊಂಡು ವರಾಂಡಾದಲ್ಲಿ ನಿಂತಿದ್ದಾರೆ.

"ನನ್ನ ಯಾರೂ ನೋಡೋಕ್ಕೆ ಬರಬಾರ್ದೂ ಅಂತ ಡಾಕ್ಟರು ಹೇಳಿದ್ದಾರೆ ಅಂತ ಹೇಳಿ ಅವನ್ನ ಆಚೆಗೆ ಕಳಿಸೋ"–ಅಯ್ಯಂಗಾರಿಗೆ ಮತ್ತೆ ತಲೆ ಗರಂ ಆಯಿತು.

ಒಂದು ನಿಮಿಷಾ ಬಿಟ್ಕೊಂಡು ಮತ್ತೆ ಬಂದ ರಾಘವ. "ಮತ್ತೇ, ನಿಮಗೆ ಬಂದಿರೋ ಖಾಯಿಲೆ ಏನೂ ಅಂತ ಕೇಳ್ಕೊಂಡು ಬಾ ಅಂತ ಹೇಳ್ತಾರೆ, ಸಾರ್."

"ಅದೆಲ್ಲಾ ಕಟ್ಕೊಂಡು ನಿಮಗೇನು ಅಂತ ಹೇಳಿ ಆಚೇಗೆ ಅಟ್ಕೋಕಿಲ್ಲವೇನೋ ಆ ಗೂಬೇನಾ? ಸರೀ, ನನಗೆ ಬಂದಿರೋ ಖಾಯಿಲೆ...ಹೌದು ನನಗೆ ಬಂದಿರೋ ಖಾಯಿಲೆ ಯಾವುದು...ಹ್ಞಾ, ಅವನ್ಗೆ ಹೇಳು ನನಗೆ ಬಂದಿರೋದು–ಏಡ್ಸ್, A-I-D-S ಅಂತ."

ಇದನ್ನು ಕೇಳಿದೋನೇ ಮೂರ್ತಿರಾವ್ ಗಾಬರಿಯಾಗಿ ಓಡಿ ಹೋದ ಅನ್ನೋದನ್ನ ಕೇಳಿ ಒಂದು ಥರಾ ಖುಷೀನೆ ಆಯಿತು, ಅವನಿಗೆ

ಮಾರನೇ ದಿನಾ ಹೇಗೂ ಫ್ಯಾಕ್ಟರೀಗೆ ಹೋಗೋ ಗೋಜಿರಲಿಲ್ಲವಲ್ಲ, ನಿಧಾನವಾಗಿ ಒಂಭತ್ತು ಗಂಟೇಗೆ ಎದ್ದು ಕಾಫೀ ಕುಡೀತಾ ತೂಕಡಿಸ್ತಾ ಕೂತಿದ್ದ, ಅಯ್ಯಂಗಾರಿ.

ಮನೇ ಮುಂದೆ ಯಾವದೋ ಕಾರು ಬಂದು ನಿಂತ ಹಾಗಾಯಿತು. ಅಲ್ಲ. ಅಷ್ಟೆಲ್ಲಾ ಹೇಳಿ ಕಳುಹಿಸಿದ್ದೀನಿ, ಕೆಲಸಕ್ಕೆ ಬರೋಕ್ಕಾಗೊಲ್ಲ ಅಂತ. ಆದ್ರೂ, ಮತ್ತೆ ಮತ್ತೆ ಹೇಳಿ ಕಳುಹಿಸ್ತಾರಲ್ಲ ಈ ಮರ್ಯಾದೇ ಇಲ್ಲದ ಜನಗಳು ಅಂತ ಬೇಜಾರಿನಿಂದ ಎದ್ದು ನೋಡಿದ್ರೆ ಯಾರೋ ಮೂರು ಜನಾ ಒಳಗೆ ಬರ್ತಾ ಇದ್ದಾರೆ. ಹಾಕ್ಕೊಂಡಿರೋ ಬಿಳೀ ಕೋಟು ನೋಡಿದ್ರೆ ಯಾರೋ ಡಾಕ್ಟ್ರುಗಳಿದ್ದ ಹಾಗೆ ಕಾಣುತ್ತೆ. ಯಾಕಿರಬಹುದು, ಅನ್ನೋದು ತಕ್ಷಣ ಹೊಳೀಲಿಲ್ಲ.

ಬಂದವರು ತಾವೇ ತಮ್ಮ ಪರಿಚಯ ಮಾಡಿ ಕೊಂಡರು.

"ನಾವು ಇದೇ ಮುಂದಿನ ಬೀದೀಲಿರೋ ನರ್ಸಿಂಗ್ ಹೋಮಿನಿಂದ ಬಂದಿದ್ದೇವೆ..........ನಿನ್ನೆ ಸಾಯಂಕಾಲ ನಿಮ್ಮ ಡೀಜಿಯಂ ಕ್ಲಬ್ಬಲ್ಲಿ ಸಿಕ್ಕಿ ಹೇಳಿದ್ರು, ನಿಮಗೆ A I D S ಬಂದಿದೆ ಅಂತ ಅದಕ್ಕೇ..........."

ಅಯ್ಯಂಗಾರಿಗೆ ಈಗ ಅರ್ಥವಾಯಿತು, ಸಮಾಚಾರ ಏನೂ ಅಂತ. ಒಂದ್ ಥರಾ ಸಂತೋಷಾನೂ ಆಯಿತು. ಆ ಬೇಕೂಫ ಮೂರ್ತಿರಾಯನ್ನ ಚೆನ್ನಾಗಿ ಫೂಲ್ ಮಾಡಿದ್ನೆಲ್ಲಾ ಅಂತ.

"ಈ A I D S ಅನ್ನೋದೇನೋ ಭಾರಿ ಕೆಟ್ಟ ಖಾಯಿಲೇನೆ. ಬಂದೋರು ಯಾರೂ ಬಹಳಾ ದಿನಾ ಉಳಿಯೊಲ್ಲ. ನಾವು ಬಹಳಾ ದಿನದಿಂದ ಇದರ ಬಗ್ಗೆ study ಮಾಡ್ಬೇಕೂ ಅನ್ಕೊಂಡಿದ್ವಿ ಇಷ್ಟು ಹತ್ರದಲ್ಲೇ ನಿಮ್ಮ ಕೇಸು, ಸಿಕ್ಕಿದ್ದು ನಮಗೆಲ್ಲಾ ತುಂಬಾ ಸಂತೋಷದ ವಿಷಯ."

ಹೌದು ಹೌದು, ಸಂತೋಷ ಅಲ್ಲದೆ ಇನ್ನೇನಾಗತ್ತೆ, ಯಾರದ್ದಾದರೂ ಗಡ್ಡ ಹತ್ಕೊಂಡ್ರೆ ಚಳೀ ಕಾಯಿಸಿ ಕೊಳ್ಳೋಕೆ ಓಡಿ ಬರೋ ನಿಮ್ಮಂಥೋರಿಗೆ ಅಂತ ಬೈದು ಓಡಿಸೋಣವೇ ಅಂತ ಅನ್ಕೊಂಡ್ರೂ, ಹೂ ಈ ತಮಾಷೇ ಎಲ್ಲೀವರೆಗೂ ಹೋಗತ್ತೋ ನೋಡೇ ಬಿಡೋಣ ಅಂದ್ಕೊಂಡೋನು ಅಯ್ಯಂಗಾರಿ.

"ಆಯ್ತು, ಡಾಕ್ಟರೇ, ಹಾಗಾದ್ರೆ ನಾನು ಈಗ ನಿಮ್ಮ ನರ್ಸಿಂಗ್ ಹೋಮಿಗೆ ಬರಬೇಕೂ ಅಂತೀರಾ ? "

"ಛೆ, ಛೆ ಈ ತಕ್ಷಣಕ್ಕೇನೂ ಬೇಡ. ಪ್ರಿಲಿಮಿನರಿ ಎಕ್ಸಾಮಿನೇಷನ್ನನ್ನ ಇಲ್ಲೇ ಮಾಡೋಣ, ಆ ಮೇಲೆ Isolation ವಾರ್ಡ್ ಖಾಲೀ ಆದ್ಮೇಲೆ ಅಲ್ಲಿಗೆ ಬರೋರಂತೆ."

ಸರಿ, ಶುರೂ ಆಯಿತು, ಅವರುಗಳ ತಪಾಸಣೆ, ಸುಮಾರು ಹದಿನೈದು ನಿಮಿಷಾ ಕಳೆದ ಮೇಲೂ ಅಂಥಾದ್ದೇನೂ ವಿಶೇಷಾ ಕಾಣಲಿಲ್ಲ. ಡಾಕ್ಟ್ರುಗಳಿಗೆ ಸ್ವಲ್ಪ ನಿರಾಸೇನೆ ಆದ ಹಾಗಾಯಿತು.

"ನಿಮಗೆ ನೀವು ಹೇಳ್ಕೊಂಡಿರೋ ರೋಗ ಇಲ್ಲವಲ್ಲ" ಅವರಲ್ಲಿ ಹಿರಿಯಾ ಅಂತ ಕಾಣ್ತಿದ್ದವನು ಬೇಜಾರಿನಲ್ಲೇ ಹೇಳಿದ.

"ಹೌದು, I am perfectly alright "

"ಮತ್ತೆ, ಬೆಳಿಗ್ಗೆ ಬೆಳಿಗ್ಗೇನೆ ನಮ್ಮನ್ನ ಇಲ್ಲಿ ಬರೋ ಹಾಗೆ ಮಾಡಿ ನಮ್ಮ ಟೈಂ ಯಾಕೆ ವೇಸ್ಟ್ ಮಾಡಿದ್ರಿ ? ಡಾಕ್ಟ್ರ ನಿರಾಸೆ ಕೋಪಕ್ಕೆ ತಿರುಗಿತ್ತು.

"ನಾನು ನಿಮ್ಮನ್ನ ಕರಿಸ್ಲಿಲ್ಲ, ನೀವೇ ಮೇಲೆ ಬಿದ್ಕೊಂಡು ಬಂದಿದ್ದೀರಿ ಅನ್ನೋ ವಿಷಯಾನ ನೀವು ಮರೆತ ಹಾಗೆ ಕಾಣತ್ತೆ, ವೈದ್ಯ ವಾಚಸ್ಪತಿಗಳೇ.

"ಆಯಿತು, ಅದಿರ್ಲಿ. ಆದ್ರೆ ಯಾಕೆ ನಿಮ್ಮ ಡೀಜಿಯಂ ಹತ್ರ ನಿಮಗೆ AIDS ಇದೆ ಅಂತ ಹೇಳ್ಕೊಂಡ್ರಿ, ಮತ್ತೆ ? "

"ಹೌದು ಅವರ್ಹತ್ರ ಹೇಳ್ದೆ, ಇನ್ಯಾರಿಗೆ ಹೇಳಲಿ ನಾನು–ನನಗೆ ಬಂದಿರೋ AIDS ಗೆ ಅವರ ಹತ್ರಾನೆ ಇಲಾಜು ಇರೋವಾಗ ? ನನಗೆ ಬಂದಿರೋದು –Annual Increment Deprivation Syndrome "